
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ನೊಂದವರಿಗೆ ಸಹಕರಿಸುವ ಸಹಾಯದ ನೆಪಹೇಳಿ ದೇಶದಲ್ಲಿ ಅರಾಜಕತೆ ನಿರ್ಮಿಸುತ್ತಿರುವ ನಕ್ಸಲರನ್ನು ನಿಗ್ರಹಿಸಬೇಕಾಗಿದೆ

ಸಂಪುಟ : 37 ಸಂಚಿಕೆ : 5 ಮನ್ಮಥ–ಕನ್ಯಾ ಕಲಿಯುಗಾಬ್ದ 5117 15–10–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

### ಪಾಕ್ ಆಕ್ರಮಿತ ಜಮ್ಮು–ಕಾಶ್ಮೀರದಲ್ಲಿ ಭುಗಿಲೆದ್ದ ಪಾಕ್ ವಿರೋಧಿ ಚಳುವಳಿ

# ಕಡಿಮೆಯಾಗುತ್ತಿದೆಯೇ ಪಾಕಿಸ್ತಾನದ ಆಯುಷ್ಯ?

**1947ರಲ್ಲಿ ಸ್ವಾತಂತ್ರ್ಯದ ಜೊತೆ ಜೊತೆಗೇ ದೇಶ ವಿಭಜನೆಯ ದುರಂತವೂ ನಡೆದಿದ್ದು ಇತಿಹಾಸ. ಅಲ್ಲಿಂದ ಇಲ್ಲಿಯವರೆಗೂ ಪ್ರತಿ ಚುನಾವಣೆಯಲ್ಲಿಯೂ ಜಮ್ಮು–ಕಾಶ್ಮೀರವು ಪಾಕಿಸ್ತಾನದ ಚುನಾವಣೆಯಲ್ಲಿ ಒಂದು ಪ್ರಮುಖ ವಿಷಯ. ಜಮ್ಮು–ಕಾಶ್ಮೀರಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರಕಿಸಿಕೊಡುವ ಭರವಸೆಯನ್ನು ಎಲ್ಲ ರಾಜಕಾರಣಿಗಳೂ ನೀಡುತ್ತಲೇ ಬಂದಿದ್ದಾರೆ. ಅಷ್ಟಕ್ಕೂ, ಜಮ್ಮು–ಕಾಶ್ಮೀರ ಯಾರಿಗೆ ಸೇರಬೇಕಾದ್ದು ಎಂಬ ಪ್ರಶ್ನೆಯನ್ನು ಅಲ್ಲಿನ ರಾಜಕಾರಣಿಗಳಿಗೆ ಯಾರಾದರೂ ಕೇಳಿದರೆ, ಉತ್ತರಿಸಲು ತಡವರಿಸುತ್ತಾರೆ. ಯಾಕೆಂದರೆ, ಜಮ್ಮು–ಕಾಶ್ಮೀರದ ಮೇಲೆ ಪಾಕಿಸ್ತಾನಕ್ಕೆ ಯಾವ ಹಕ್ಕೂ ಇಲ್ಲ!**


## ಇತಿಹಾಸ

1947ರ ವಿಭಜನೆಯ ಬಳಿಕ ಜಮ್ಮು–ಕಾಶ್ಮೀರದ ಮೇಲೆ ಆಕ್ರಮಣ ನಡೆಸಿತು ಪಾಕಿಸ್ತಾನ. ಅಷ್ಟರಲ್ಲಿ ಜಮ್ಮು–ಕಾಶ್ಮೀರದ ಮಹಾರಾಜ ಹರಿಸಿಂಗರು ಸಂಪೂರ್ಣ ಜಮ್ಮು–ಕಾಶ್ಮೀರ ರಾಜ್ಯವನ್ನು ಭಾರತದೊಂದಿಗೆ ವಿಲೀನ ಮಾಡಿದರು. ಭಾರತದ ಸೇನೆ ಕೂಡಲೇ ಅಲ್ಲಿಗೆ ಧಾವಿಸಿ ಪಾಕಿಸ್ತಾನ ಮುಂದೆ ಬರುವುದನ್ನು ತಡೆಯಿತು. ಅಷ್ಟೇ ಅಲ್ಲದೇ, ಪಾಕಿಸ್ತಾನ ತನ್ನ ನೆಲವನ್ನು ಆಕ್ರಮಿಸಿಕೊಂಡಿದೆ ಎಂದು ದೂರನ್ನು ವಿಶ್ವಸಂಸ್ಥೆಯ ಬಳಿ ಒಯ್ಯಿತು. ಪಾಕಿಸ್ತಾನ ಆಕ್ರಮಿತ ಭಾಗಗಳಿಂದ ತನ್ನ ಸೇನೆಯನ್ನು ಹಿಂತೆಗೆಯಬೇಕು ಮತ್ತು ಅಲ್ಲಿ ಭಾರತ ತನ್ನ ಸೇನೆಯನ್ನು ನಿಯೋಜಿಸಿ ಶಾಂತಿ ಸ್ಥಾಪಿಸಬೇಕೆಂದು ಹೇಳಿತು. ಆದರೆ, ಪಾಕಿಸ್ತಾನ ಆ ಭೂಭಾಗವನ್ನು ಬಿಟ್ಟುಕೊಡಲೇ ಇಲ್ಲ. ಸಂಪೂರ್ಣ ಜಮ್ಮು–ಕಾಶ್ಮೀರದಲ್ಲಿ ಜನಮತಗಣನೆ ನಡೆಸಿ ಅಲ್ಲಿನ ಜನರ ಆಶೋತ್ತರಗಳನ್ನು ತಿಳಿದು ಅವರ ಭವಿಷ್ಯವನ್ನು ನಿರ್ಧರಿಸುವುದಾಗಿ ವಿಶ್ವಸಂಸ್ಥೆಗೆ ಮಾತು ಕೊಟ್ಟಿದ್ದ ಭಾರತ, ಪಾಕಿಸ್ತಾನ ಅಲ್ಲಿಂದ ತನ್ನ ಸೇನೆಯನ್ನು ಹಿಂದೆತೆಗೆಯದಿದ್ದುದರಿಂದ, ತಾನು ಜನಮತಗಣನೆ ನಡೆಸಲು ಸಾಧ್ಯವಿಲ್ಲವೆಂದು ವಿಶ್ವಸಂಸ್ಥೆಗೆ ತಿಳಿಸಿತು. ತನ್ನ ಬಳಿಯಿರುವ ಜಮ್ಮು–ಕಾಶ್ಮೀರದ ಉಳಿದ ಭಾಗಗಳಿಗೆ ಚುನಾವಣೆಯನ್ನು ನಡೆಸಿ, ಅಲ್ಲಿನ ವಿಧಾನಸಭೆ (ಆಗಿನ ಸಂವಿಧಾನ ರಚನಾ ಸಭೆ) ಯಿಂದ ವಿಲೀನಕ್ಕೆ ಅನುಮೋದನೆಯನ್ನು ಪಡೆಯಿತು ಭಾರತ ಸರ್ಕಾರ. ಹೀಗೆ ವಿಲೀನ ಸಂಪೂರ್ಣವಾಯಿತು ಮತ್ತು ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿದಂತೆ ತನ್ನ ಎಲ್ಲಾ ಬದ್ಧತೆಗಳನ್ನು ಭಾರತ ಪೂರೈಸಿತು. ಆದರೆ, ಪಾಕ್ ಆಕ್ರಮಿತ ಜಮ್ಮು–ಕಾಶ್ಮೀರವೆಂಬುದು ಮಾತ್ರ ಇತ್ತ ಭಾರತಕ್ಕೂ ಸೇರದೇ, ಅತ್ತ ಪಾಕಿಸ್ತಾನದಲ್ಲೂ ಸಂಪೂರ್ಣ ಮಾನ್ಯತೆ ಪಡೆಯದೇ ಅತಂತ್ರ ಸ್ಥಿತಿಯಲ್ಲೇ ಉಳಿಯಿತು. ಉದಾಹರಣೆಗೆ, ಪಾಕಿಸ್ತಾನದ ಸಂವಿಧಾನದಲ್ಲಿ ಗುರುತಿಸಿರುವ ದೇಶದ ಸೀಮೆಯೊಳಗೆ ಈ ಪ್ರದೇಶ ಬರುವುದಿಲ್ಲ. ಹಾಗಾಗಿ, ಎಲ್ಲ ಆಡಳಿತ ವ್ಯವಸ್ಥೆಗಳಲ್ಲಿಯೂ, ನ್ಯಾಯ ವ್ಯವಸ್ಥೆಯಲ್ಲಿಯೂ ಈ ಭಾಗದ ಜನರಿಗೆ ತಾರತಮ್ಯ ಮುಂದುವರಿದುಕೊಂಡೇ ಬಂದಿದೆ.

## ಈಗಿನ ಕತೆಯೇನು?

ಈಗಲೂ ಪಾಕಿಸ್ತಾನ ಆಕ್ರಮಿಸಿಕೊಂಡಿರುವ ಜಮ್ಮು–ಕಾಶ್ಮೀರದ ಜನರು ಹೀನಾಯ ಸ್ಥಿತಿಯಲ್ಲೇ ಬದುಕುತ್ತಿದ್ದಾರೆ. ಅತ್ತ ಪಾಕಿಸ್ತಾನಕ್ಕೆ ಅಥವಾ ಇತ್ತ ಜಮ್ಮು–ಕಾಶ್ಮೀರಕ್ಕೆ ಹೋಲಿಸಿದರೆ, ಅಲ್ಲಿನ ಮೂಲಭೂತ ಸೌಕರ್ಯಗಳು, ಜನರ ಶಿಕ್ಷಣಮಟ್ಟ, ಆರ್ಥಿಕ ಸ್ಥಿತಿಗತಿಗಳು ತುಂಬಾ ಕೆಳಮಟ್ಟದಲ್ಲೇ ಇವೆ. ಇತ್ತೀಚೆಗೆ, ಇವೆಲ್ಲವನ್ನೂ ವಿರೋಧಿಸಿ ಅಲ್ಲಿ ಪ್ರತಿಭಟನೆಗಳು ಭುಗಿಲೆದ್ದಿವೆ. 'ನಮ್ಮನ್ನು ಭಾರತಕ್ಕೆ ಹೋಗಲು ಬಿಡಿ' ಎಂಬ ಘೋಷಣೆಗಳೊಂದಿಗೆ ಎಲ್ಲೆಡೆ ಪ್ರತಿಭಟನಾಕಾರರು ರ್‍ಯಾಲಿ ನಡೆಸುತ್ತಿದ್ದಾರೆ. ಭಾರತದಲ್ಲಿ ನಡೆಯುತ್ತಿರುವ ಅಭಿವೃದ್ಧಿಯನ್ನು ಗಮನಿಸಿದ ಅವರಿಗೆ ಭಾರತದೊಂದಿಗೆ ಇರುವುದೇ ಮೇಲು ಎನ್ನುವ ಭಾವನೆ ಬಲವಾಗುತ್ತಿದೆ.

ಇತ್ತ ಪಾಕ್ ಆಕ್ರಮಿತ ಪ್ರದೇಶವಾದ ಗಿಲ್ಗಿಟ್ ಬಾಲ್ಟಿಸ್ತಾನದಲ್ಲಂತೂ ಮೊದಲಿನಿಂದಲೂ ಪಾಕಿಸ್ತಾನ ವಿರೋಧಿ ಭಾವನೆಯಿದೆ. ಪಾಕಿಸ್ತಾನ ತನ್ನ ಬಲ ಪ್ರಯೋಗಿಸಿ ಆ ಪ್ರದೇಶವನ್ನು ತನ್ನ ಬಳಿಯಿಟ್ಟುಕೊಂಡಿದೆ. ಅಲ್ಲಿರುವ ಜನರಲ್ಲಿ ಹೆಚ್ಚಿನವರು ಷಿಯಾ ಮುಸ್ಲಿಮರು. ಮೊದಲು ಬೌದ್ಧರಾಗಿದ್ದ ಅವರ ಜೀವನದಲ್ಲಿ ಇಂದಿಗೂ ಟಿಬೆಟ್ ಸಂಸ್ಕೃತಿಯ ಅಂಶಗಳು ಜೀವಂತವಾಗಿವೆ. ಪಾಕಿಸ್ತಾನದ ಬಹುಸಂಖ್ಯಾತ ಸುನ್ನಿ ಮುಸ್ಲಿಮರಿಗೂ ಇವರಿಗೂ ಮೊದಲಿನಿಂದಲೂ ಎಣ್ಣೆ ಸೀಗೆಕಾಯಿ ಸಂಬಂಧ. ಹಾಗಾಗಿ, ಇಲ್ಲಿ ಆಗಾಗ ಪಾಕಿಸ್ತಾನ ವಿರೋಧಿ ಪ್ರದರ್ಶನಗಳು ಸಾಮಾನ್ಯ. ಜೊತೆಗೆ, ಸರ್ಕಾರಿ ಕೆಲಸದ ನೆಪದಲ್ಲಿ ಸುನ್ನಿ ಮುಸ್ಲಿಮರನ್ನು ಅಲ್ಲಿಗೆ ತುರುಕಿ ಅಲ್ಲಿನ ಜನಸಂಖ್ಯಾ ಸಂರಚನೆಯನ್ನು ನಿಧಾನವಾಗಿ ವ್ಯತ್ಯಾಸ ಮಾಡುವ ಪಾಕಿಸ್ತಾನದ ಹುನ್ನಾರವನ್ನು ಅಲ್ಲಿನ ಜನರು ವಿರೋಧಿಸುತ್ತಲೇ ಬಂದಿದ್ದಾರೆ. ಅವರ ಮೇಲೆ ಪ್ರತಿನಿತ್ಯ ಪಾಕಿಸ್ತಾನದ ಪೊಲೀಸ್ ಮತ್ತು ಸೇನೆ ನಡೆಸುವ ದೌರ್ಜನ್ಯಗಳು ವರದಿಯಾಗುವುದೇ ಇಲ್ಲ. ಕೇವಲ ಭಾರತದಲ್ಲಿ ಮಾತ್ರವಲ್ಲ, ಇಂಗ್ಲೆಂಡ್, ಅಮೆರಿಕಾ ಮೊದಲಾದ ದೇಶಗಳಲ್ಲೂ ಪಾಕ್ ಆಕ್ರಮಿತ ಜಮ್ಮು–ಕಾಶ್ಮೀರದ ಜನರು ಸಂಘಟನೆಗಳನ್ನು ಮಾಡಿಕೊಂಡು ಪಾಕಿಸ್ತಾನದ ವಿರುದ್ಧ ಹೋರಾಡುತ್ತಿದ್ದಾರೆ.




## ಪಾಕಿಸ್ತಾನದಿಂದ ಸ್ವಾತಂತ್ರ್ಯ ಬಯಸುತ್ತಿರುವ ಇತರ ಪ್ರದೇಶಗಳು

ಕೇವಲ ಪಾಕ್ ಆಕ್ರಮಿತ ಜಮ್ಮು ಕಾಶ್ಮೀರದ ಜನರು ಮಾತ್ರವಲ್ಲ, ಇತರ ಪ್ರದೇಶಗಳೂ ಪಾಕಿಸ್ತಾನದಲ್ಲಿ ಖುಷಿಯಾಗೇನೂ ಇಲ್ಲ. ಬಲೂಚಿಸ್ತಾನದಲ್ಲೂ (ಆಫ್ಘಾನಿಸ್ತಾನದ ದಕ್ಷಿಣ ಭಾಗಕ್ಕೆ ತಾಗಿಕೊಂಡಿರುವ ಪ್ರದೇಶ) ಬಹಳ ಹಿಂದಿನಿಂದಲೂ ಪ್ರತ್ಯೇಕತೆಯ ಕೂಗು ಕೇಳಿಬರುತ್ತಿದೆ. ಈ ಪ್ರತ್ಯೇಕ ಬುಡಕಟ್ಟಿಗೆ ಸೇರಿದ ಈ ಭಾಗದ ಜನರು ತಮ್ಮನ್ನು ತಾವು ಪ್ರತ್ಯೇಕವಾಗಿಯೇ ಗುರುತಿಸಿಕೊಳ್ಳುತ್ತಾರೆ. ಅಭಿವೃದ್ಧಿಯಲ್ಲಿ, ಸರ್ಕಾರಿ ನೌಕರಿಯಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತಿದೆ, ಎಲ್ಲೆಡೆ ಪಂಜಾಬಿಗಳ ದರ್ಬಾರು ನಡೆಯುತ್ತಿದೆ ಎನ್ನುವುದು ಅವರ ಅಳಲು. ಅದು ಸತ್ಯವೂ ಹೌದು ಎನ್ನುವುದು ಅಂಕಿಅಂಶಗಳಿಂದ ತಿಳಿಯುತ್ತದೆ. ಬಲೂಚಿಸ್ತಾನ ಲಿಬರೇಶನ್ ಫ್ರಂಟ್, ಬಲೂಚಿಸ್ತಾನ ಲಿಬರೇಶನ್ ಆರ್ಮಿ ಮೊದಲಾದ ಉಗ್ರಗಾಮಿ ಸಂಘಟನೆಗಳು ಬಾಂಬ್ ಸ್ಫೋಟ ಮೊದಲಾದ ಕೃತ್ಯಗಳನ್ನು ಆಗಾಗ ಮಾಡುತ್ತಲೇ ಇವೆ. ರಾಜಕೀಯ ಹೋರಾಟಗಳೂ, ಪಾಕಿಸ್ತಾನದ ನೆಲದಲ್ಲೂ, ವಿದೇಶಗಳಲ್ಲೂ ನಡೆಯುತ್ತಿವೆ.

ಸಿಂಧ್ ಪ್ರದೇಶದ ಜನರದ್ದೂ ಇದೇ ರೀತಿಯ ಹೋರಾಟ. ನಮ್ಮ ರಾಜಸ್ತಾನ, ಗುಜರಾತಿಗೆ ತಾಗಿಕೊಂಡಿರುವ ಈ ಪ್ರದೇಶವನ್ನೂ ಕಡೆಗಣಿಸಲಾಗುತ್ತಿದೆ. ಸಿಂಧಿ ಜನರಿಗೆ ಹೆಚ್ಚಿನ ಪ್ರಾತನಿಧ್ಯ ಕೊಡುತ್ತಿಲ್ಲ ಎಂಬ ಕೂಗು ಕೇಳಿ ಬರುತ್ತಿದೆ. 'ಸಿಂಧೂ ದೇಶ' ಎಂಬ ಪ್ರತ್ಯೇಕ ರಾಷ್ಟ್ರದ ಕಲ್ಪನೆಯನ್ನು ಅಲ್ಲಿನ ರಾಜಕಾರಣಿಗಳು ಹುಟ್ಟುಹಾಕಿದ್ದಾರೆ. ಅದಕ್ಕೆ ರಾಜಕೀಯ ಬೆಂಬಲವೂ ಸಿಗುತ್ತಿದೆ.




ಅಲ್ಲದೇ ವಾಯುವ್ಯ ಸರಹದ್ದು ಪ್ರಾಂತಗಳಲ್ಲೂ, ಖೈಬರ್ ಪಖ್ತುನ್ಕ್ವಾ ಪ್ರದೇಶಗಳ ಜನರೂ ತಮಗೆ ಪಾಕಿಸ್ತಾನದಿಂದ ಅನ್ಯಾಯವಾಗುತ್ತಿದೆ ಎಂಬ ಕೂಗೆಬ್ಬಿಸುತ್ತಿದ್ದಾರೆ. ಈ ಎಲ್ಲ ಪ್ರದೇಶಗಳ ಜನರೂ ತಮಗಾಗಿ ಪ್ರತ್ಯೇಕ ಧ್ವಜ, ರಾಜಕೀಯ ಪಕ್ಷಗಳನ್ನೂ ಸ್ಥಾಪಿಸಿಕೊಂಡಿದ್ದಾರೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ, ಪಂಜಾಬಿ ಮುಸ್ಲಿಮರ ದಬ್ಬಾಳಿಕೆಯಿಂದ ಮುಕ್ತಿ ಪಡೆಯುವುದಕ್ಕಾಗಿ ಈ ಎಲ್ಲ ಭಾಗಗಳ ಜನರು ಹೋರಾಡುತ್ತಿದ್ದಾರೆ.

ಒಟ್ಟಿನಲ್ಲಿ ಆಂತರಿಕ ಗಲಭೆಗಳಿಂದ ಬೇಯುತ್ತಿರುವ ಪಾಕಿಸ್ತಾನದ ಆಯುಷ್ಯ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ ಎನ್ನುವುದು ಮಾತ್ರ ಸತ್ಯ. ವಿಶೇಷವೆಂದರೆ, ಪಾಕಿಸ್ತಾನದಲ್ಲಿ ಪ್ರತ್ಯೇಕತೆಯ ಕೂಗೆಬ್ಬಿಸುತ್ತಿರುವ ಈ ಎಲ್ಲರಿಗೂ ಭಾರತದ ಬಗ್ಗೆ ಮೃದುಧೋರಣೆಯಿದೆ. ಎಷ್ಟೆಂದರೂ, ಭಾರತಮಾತೆಯಿಂದ ಬಲವಂತವಾಗಿ ಪ್ರತ್ಯೇಕಿಸಲ್ಪಟ್ಟ ಮಕ್ಕಳೇ ತಾನೇ ಇವರೆಲ್ಲರೂ! ತಾಯಿಯ ಬಗ್ಗೆ ಪ್ರೀತಿಯಿಲ್ಲದೇ ಇರಲು ಹೇಗೆ ಸಾಧ್ಯ? ಒಟ್ಟಿನಲ್ಲಿ ಪಾಕ್ ಆಕ್ರಮಿತ ಜಮ್ಮು–ಕಾಶ್ಮೀರವು ಪುನಃ ಭಾರತದ್ದೇ ಭಾಗವಾಗುವ ಸಾಧ್ಯತೆಗಳು ದೂರದಲ್ಲಿಯಾದರೂ ಕಾಣುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ. ಇದು ಮೊದಲ ಹೆಜ್ಜೆ. ನಾವು ಕಳೆದುಕೊಂಡ ಒಂದೊಂದೇ ಭೂಭಾಗಗಳು ಪುನಃ ಭಾರತಮಾತೆಯ ಮಡಿಲಿಗೆ ಸೇರುವ ದಿನ ಬಂದರೂ ಆಶ್ಚರ್ಯವಿಲ್ಲ. ಹಾಗಾಗಲಿ, ಪ್ರಪಂಚಕ್ಕೇ ದಿಕ್ಕು ತೋರಿಸಿದ ಈ ಭಾರತ ಭೂಮಿ ಪುನಃ ವಿಶ್ವನಾಯಕನಾಗಿ ಮೆರೆಯಲಿ, ತನ್ಮೂಲಕ ಪ್ರಪಂಚದಲ್ಲಿ ಶಾಂತಿ ಸಹಬಾಳ್ವೆಯ ಹೊಸ ಯುಗ ಶುರುವಾಗಲಿ ಎಂಬ ಆಶಯ ನಮ್ಮದಿರಲಿ.

ಸದ್ದಿಲ್ಲದ ಸಾಧಕರು

# ಹಸಿರು ಪ್ರೀತಿಯ ಪಾಠ ಹೇಳುವ ಅಪರೂಪದ ಮೇಷ್ಟ್ರು

ಪರಿಸರ ಸಂರಕ್ಷಣೆ ಅನ್ನೋದು ಈ ದೇಶದ ಎಲ್ಲ ಜನರ ಕರ್ತವ್ಯ ಮತ್ತು ಹಕ್ಕು ಎಂದು ಪ್ರತಿಪಾದಿಸುವ ಅಪರೂಪದ ಮೇಷ್ಟ್ರು ಬಿ.ವಿ. ಗುಂಡಪ್ಪ. ತುಮಕೂರು ಜಿಲ್ಲೆಯ ಪರಿಸರ ಹೋರಾಟ ಮತ್ತು ಜೀವ ವೈವಿಧ್ಯ ದಾಖಲಾತಿಗೆ ಅವರು ನೀಡಿರುವ ಕೊಡುಗೆ ಗಮನಾರ್ಹ.

ಕಿತ್ತಳೆ ಬಣ್ಣದ ಸೂರ್ಯ ಇನ್ನೂ ಗುಡ್ಡದ ಬೆನ್ನಿಗೆ ನಿಂತು ಕಣ್ಣಾಮುಚ್ಚಾಲೆ ಆಡುತ್ತಿದ್ದ. ಮಧುಗಿರಿ ತಾಲ್ಲೂಕಿನ ಮೈದನಹಳ್ಳಿಯಲ್ಲಿ ಚಿಗರಿಗಳ ಓಟ, ಹಕ್ಕಿಗಳ ಕಣ್ಣುಮುಚ್ಚಾಲೆ ಆಟ ನೋಡುತ್ತಾ ಮೈಮರೆತು ನಿಂತಿದ್ದ ನೀಳಕಾಯದ, ದಪ್ಪ ಫ್ರೇಮಿನ ಕನ್ನಡಕಧಾರಿ ಥಟ್ಟನೆ ಕತ್ತೆತ್ತಿ ದಿಟ್ಟಿಸಿದರು. ಹಸಿರು ಹುಲ್ಲುಗಾವಲಿನ ಬೈತಲೆ ಸೀಳಿದಂತೆ ಉದ್ದಕ್ಕೆ ಚಾಚಿ ಮಲಗಿದ್ದ ಕೆಂಪು ಮಣ್ಣಿನ ರಸ್ತೆಯಲ್ಲಿ ದೂಳೆಬ್ಬಿಸುತ್ತಾ ಲಾರಿ ಬರುತ್ತಿತ್ತು. ಇಳಿಜಾರಿನಲ್ಲಿ ವೇಗ ಹೆಚ್ಚಿಸಿಕೊಂಡಿದ್ದ ಲಾರಿಗೆ ಎದುರಾಗಿ ಆ ಹಿರಿಯರು ಅಲುಗಾಡದ ಪ್ರತಿಮೆಯಂತೆ ನಿಂತು ಬಿಟ್ಟರು. ವೇಗವನ್ನು ಇನಿತೂ ಕಡಿಮೆ ಮಾಡದ ಚಾಲಕ ಒಂದೇ ಸಮನೆ ಹಾರ್ನ್ ಬಾರಿಸಿ. 'ಗುದ್ದಿ ಬಿಡುತ್ತೇನೆ ನೋಡು...' ಎನ್ನುವಂತೆ ತೀರಾ ಸಮೀಪಕ್ಕೆ ಬ್ರೇಕ್ ಹಾಕಿ ನಿಲ್ಲಿಸಿದ.

'ಏಯ್ ಮೊದಲು ಕೆಳಗಿಳಿ, ಯಾರು ನೀನು? ಲಾರಿ ಯಾರದು? ಕಾಡಿನೊಳಗೆ ಲಾರಿ ತರಬಾರ್ದು ಅಂತ ಗೊತ್ತಿಲ್ವಾ? ಎಷ್ಟು ಧೈರ್ಯ ನಿಮಗೆ?' ಎಂದು ಆ ವ್ಯಕ್ತಿ ಒಂದೇ ಸಮನೆ ಪ್ರಶ್ನೆಗಳನ್ನು ಎಸೆದರು. ಲಾರಿಯಲ್ಲಿದ್ದ ಚಾಲಕ ಮರಳು ಲೋಡರ್‌ಗಳು ಇನ್ನೆಂದೂ ಈ ದಾರಿಯಲ್ಲಿ ಬರಲ್ಲ ಎಂದು ಆಣೆ–ಪ್ರಮಾಣ ಮಾಡಿ ಓಡಿದರು.

ಮೇಲಿನ ಪ್ರಸಂಗದಲ್ಲಿ ಪ್ರಾಣವನ್ನು ಪಣವಾಗಿಟ್ಟು ಪರಿಸರ ಕಾಳಜಿ ಮೆರೆದವರ ಹೆಸರು ಬಿ.ವಿ.ಗುಂಡಪ್ಪ. ತುಮಕೂರು ಜಿಲ್ಲೆಯಲ್ಲಿ ಅವರು 'ಮೇಷ್ಟ್ರು ಗುಂಡಪ್ಪ' ಎಂದೇ ಹೆಸರುವಾಸಿ. ಪ್ರಸ್ತುತ ಗುಬ್ಬಿ ತಾಲ್ಲೂಕು ಸಿ.ಎಸ್. ಪುರ (ಚಂದ್ರಶೇಖರಪುರ) ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಪ ಪ್ರಾಚಾರ್ಯರು. ಪರಿಸರ ಅಧ್ಯಯನ, ರಕ್ಷಣೆ, ಕ್ಷೇತ್ರಕಾರ್ಯ, ವಿಜ್ಞಾನ ಶಿಕ್ಷಣ, ಶಾಲಾ ಆಡಳಿತ ನಿರ್ವಹಣೆಯಲ್ಲಿ ಅವರದು ಮಾದರಿ ಸಾಹಸ. 'ಸರ್ಕಾರಿ ಸಂಬಳ ಪಡೆದೂ ಸರ್ಕಾರದ ಇತರ ಇಲಾಖೆಗಳ ಅಧಿಕಾರಿಗಳ ವಿರುದ್ಧವೇ ಮಾತನಾಡ್ತೀರಿ, ಪೊಲೀಸರಿಗೆ ದೂರು ಕೊಡ್ತೀರಿ. ಇದು ತಪ್ಪಲ್ವೇ? ನಿಮಗೆ ಕೆಲಸದಲ್ಲಿ ತೊಂದರೆಯಾಗೊಲ್ವೇ?' ಎಂದು ಹಲವರು ಗುಂಡಪ್ಪ ಮೇಷ್ಟ್ರನ್ನು ಕೇಳುತ್ತಾರೆ.



'ನಾನು ಸರ್ಕಾರದ ಕೆಲಸದಲ್ಲಿರೋದು ನಿಜ. ಮರಗಳ್ಳರು, ಬೇಟೆಗಾರರ ಬಗ್ಗೆ ಸರ್ಕಾರಿ ನೌಕರರು ಪೊಲೀಸರಿಗೆ ದೂರು ಕೊಡಬಾರದು ಎಂದು ಯಾವುದಾದರೂ ನಿಯಮ ಹೇಳುತ್ತದೆಯೇ? ನಮ್ಮ ಕೆರೆಗಳು, ಕಾಡು, ವನ್ಯಪ್ರಾಣಿಗಳನ್ನು ಉಳಿಸಿಕೊಳ್ಳಲು ಹೋರಾಟ ಮಾಡುವುದು ಸಂವಿಧಾನ ಈ ದೇಶದ ಪ್ರಜೆಯಾಗಿ ನನಗೆ ಕೊಟ್ಟಿರುವ ಹಕ್ಕು. ನಾನು ಸರ್ಕಾರದ ವಿರುದ್ಧ ಎಲ್ಲಿಯೂ ಮಾತನಾಡಿಲ್ಲ. ಆದರೆ ಅರಣ್ಯ, ಪೊಲೀಸ್, ನೀರಾವರಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಅವರ ಕರ್ತವ್ಯದ ಬಗ್ಗೆ ಗಮನ ಸೆಳೆದಿದ್ದೇನೆ ಅಷ್ಟೇ' ಎಂದು ದೃಢವಾಗಿ ಹೇಳುತ್ತಾರೆ.

ತುಮಕೂರಿನಲ್ಲಿರುವ ವನ್ಯಜೀವಿ ನಿಸರ್ಗ ಜಾಗೃತಿ ಸಂಸ್ಥೆಯ ಅಧ್ಯಕ್ಷರಾಗಿ ಕಳೆದ 20 ವರ್ಷದಿಂದ ಪರಿಸರ ಹೋರಾಟದಲ್ಲಿ ಸಕ್ರಿಯರಾಗಿದ್ದಾರೆ. ತುಮಕೂರು ನಗರದಲ್ಲಿ ಕಸ ಸುಡುತ್ತಿದ್ದ ನಗರಸಭೆಗೆ ಚುರುಕು ಮುಟ್ಟಿಸಿದ್ದು, ಜಿಲ್ಲೆಯ ವಿವಿಧೆಡೆ ಕೆರೆ ಒತ್ತುವರಿ ವಿರುದ್ಧದ ಹೋರಾಟ, ಪಕ್ಷಿ ಗಣತಿ, ಕೃಷ್ಣಮೃಗ ಗಣತಿ, ಕಾಡುಪಾಪ ಗಣತಿಗೆ ಅವರ ಕೊಡುಗೆ ದೊಡ್ಡದು. ಅಕ್ರಮ ಮರಳು ಸಾಗಣೆ–ಕಾಡಿನಲ್ಲಿ ಕ್ವಾರಿ ಸ್ಥಾಪನೆ ವಿರುದ್ಧ ತಮ್ಮದೇ ರೀತಿಯಲ್ಲಿ ಇಂದಿಗೂ ಹೋರಾಟ ಮುಂದುವರಿಸಿದ್ದಾರೆ.

**ಚಿಗುರೊಡೆದ ಪರಿಸರ ಪ್ರೀತಿ:** ಪದವಿ ಹಂತದಲ್ಲಿ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಅಧ್ಯಯನ ಮಾಡಿದ್ದ ಗುಂಡಪ್ಪ ಅವರಿಗೆ ಮೊದಲಿಂದಲೂ ಪರಿಸರ ಎಂದರೆ ಬೆರಗು ಹುಟ್ಟಿಸುವ ಆಕರ್ಷಣೆ. ಬಿ.ಇಡಿ ಪದವಿ ಮುಗಿಸಿದ ನಂತರ (1986) ಕಾರ್ಕಳ ತಾಲ್ಲೂಕು ಸಾಣೂರಿನಲ್ಲಿ ವಿಜ್ಞಾನ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಅಲ್ಲಿನ ಶ್ರೀ ಭುವನೇಂದ್ರ ಕಾಲೇಜಿನಲ್ಲಿದ್ದ ಡಾ. ಪ್ರಭಾಕರ ಆಚಾರ್ಯ ಅವರ ಗರಡಿಯಲ್ಲಿ ಚಿಟ್ಟೆ ಪಕ್ಷಿವೀಕ್ಷಣೆ ಕಲಿತರು. ವಿದ್ಯಾರ್ಥಿಗಳಿಗಾಗಿ ಆಚಾರ್ಯರು ಸಂಘಟಿಸುತ್ತಿದ್ದ ಪರಿಸರ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಎನ್.ಎ. ಮಧ್ಯಸ್ಥರಂಥ ಪ್ರಕೃತಿಪ್ರಿಯರ ಒಡನಾಟದಲ್ಲಿ ಪಶ್ಚಿಮಘಟ್ಟದ ಅಧ್ಯಯನ ಆರಂಭವಾಯಿತು. ವಿಜಯಾ ಬ್ಯಾಂಕ್‌ನಲ್ಲಿ ಸಾಲ ಮಾಡಿ ಕ್ಯಾಮೆರಾ ಖರೀದಿಸಿದರು.

**ಕಾಡುಪಾಪ ಸೆಳೆತ:** ತುಮಕೂರು ತಾಲ್ಲೂಕಿನ ನಾಗವಲ್ಲಿ ಗ್ರಾಮದ ಸಮೀಪ ಕಂಡುಬರುವ ಅಳಿವಿನಂಚಿನ ಜೀವಿ, ಕಾಡುಪಾಪಗಳನ್ನು ಅರಣ್ಯ ಇಲಾಖೆ, ಸರ್ಕಾರ ಗುರುತಿಸುವಂತೆ ಮಾಡಿದ್ದು ಗುಂಡಪ್ಪ ಅವರ ಬಹುದೊಡ್ಡ ಸಾಧನೆ. 1995ರಲ್ಲಿ ಅವರು ನಾಗವಲ್ಲಿ ಶಾಲೆಗೆ ಶಿಕ್ಷಕರಾಗಿ ಬಂದರು. ಭಾರತೀಯ ವಿಜ್ಞಾನ ಕೇಂದ್ರದ ಪರಿಸರ ವಿಭಾಗ 2000ನೇ ಇಸವಿಯಲ್ಲಿ ಆರಂಭಿಸಿದ 'ಕರ್ನಾಟಕ ಜೀವ ವೈವಿಧ್ಯ ಕಾರ್ಯಪದ್ಧತಿ ಮತ್ತು ಕಾರ್ಯಯೋಜನೆ' ಕಾರ್ಯಕ್ರಮಕ್ಕೆ ಆಯ್ಕೆಯಾದ ರಾಜ್ಯದ 54 ಶಾಲೆಗಳಲ್ಲಿ ನಾಗವಲ್ಲಿ ಶಾಲೆಯೂ ಸೇರಿತ್ತು.

ಯೋಜನಾ ವರದಿ ಸಲ್ಲಿಕೆ ನಂತರ ಔಷಧೀಯ ಸಸ್ಯಗಳು, ಸಿಹಿ ನೀರು ಮೀನು ಮತ್ತು ಶಾಲಾ ವೈವಿಧ್ಯ ದಾಖಲಾತಿ ವಿಷಯದಲ್ಲಿ ನಾಗವಲ್ಲಿ ಶಾಲೆಗೆ ಬಹುಮಾನ ಘೋಷಣೆಯಾಯಿತು. ಬಹುಮಾನದ ಮೊತ್ತವಾಗಿ ದೊರೆತ 10 ಸಾವಿರ ರೂಪಾಯಿಯನ್ನು ಕಾಡುಪಾಪಗಳ ಅಧ್ಯಯನಕ್ಕೆ ಬಳಸಲು ಗುಂಡಪ್ಪ ನಿರ್ಧರಿಸಿದರು. ಅವರ ಪ್ರಯತ್ನದಿಂದ ಜಗತ್ತಿನ ಮೊದಲ ಕಾಡುಪಾಪ ಗಣತಿ 2003ರಲ್ಲಿ ನಾಗವಲ್ಲಿ ಎಂಬ ಪುಟ್ಟ ಹಳ್ಳಿಯಲ್ಲಿ ನಡೆಯಿತು. ಶಾಲಾಮಕ್ಕಳು ಮತ್ತು ಸಹೃದಯ ರೈತರೇ ಗಣತಿದಾರರಾಗಿ ಕೆಲಸ ಮಾಡಿದರು. 'ಕಾಡುಪಾಪಗಳ ತಾಣ ನಾಗವಲ್ಲಿ' ಎಂಬ ಫಲಕಗಳು ಶಾಲೆ ಸೇರಿದಂತೆ ಹಲವೆಡೆ ರಾರಾಜಿಸಿದವು.

**ತ್ರಿವಿಕ್ರಮ ಸಾಧನೆ:** ತುಮಕೂರು ಜಿಲ್ಲೆಯ ಜೀವವೈವಿಧ್ಯ ದಾಖಲಾತಿಯಲ್ಲಿ ಗುಂಡಪ್ಪನವರದು ತ್ರಿವಿಕ್ರಮ ಸಾಧನೆ. ವಿಶ್ವವಿದ್ಯಾಲಯಗಳ ಪರಿಸರ ಅಧ್ಯಯನ ಸಂಸ್ಥೆಗಳು ಅಥವಾ ಅರಣ್ಯ ಇಲಾಖೆಯ ಸಿಬ್ಬಂದಿಯ ಹಲವು ತಂಡಗಳು ಲಕ್ಷಾಂತರ ರೂಪಾಯಿ ವ್ಯಯಿಸಿ ಮಾಡಬೇಕಿದ್ದ ಕೆಲಸವನ್ನು ಗುಂಡಪ್ಪ ಮೇಷ್ಟ್ರು ಕಳೆದ 20 ವರ್ಷದಲ್ಲಿ ಏಕಾಂಗಿಯಾಗಿ ಮಾಡಿದ್ದಾರೆ. ಅವರ ಬಳಿ ಜಿಲ್ಲೆಯಲ್ಲಿರುವ 800 ಸಸ್ಯ ಪ್ರಭೇದ, 118 ಬಗೆಯ ಚಿಟ್ಟೆಗಳು, 27 ಜಾತಿಯ ಹಾವುಗಳು, 17 ಮಾದರಿ ಕಪ್ಪೆಗಳು, 377 ರೀತಿಯ ಪಕ್ಷಿಗಳು, 20 ಜಾತಿಯ ಸಿಹಿ ನೀರು ಮೀನುಗಳ ಛಾಯಾಚಿತ್ರ ಮತ್ತು ವೈಜ್ಞಾನಿಕ ಮಾಹಿತಿ ಸಂಗ್ರಹ ಇದೆ. ಇದರ ಜೊತೆಗೆ ಕೆರೆಗಳು, ಕಾಡುಗಳು, ಪಕ್ಷಿ–ಪ್ರಾಣಿಗಳ ಹಿಕ್ಕೆ–ಮಲದ ಮಾದರಿಗಳು, ಹೂಗಳ ಚಿತ್ರಗಳೂ ಇವೆ. ಇವರ ಬಳಿ ಇರುವ ದತ್ತಾಂಶ 1500 ಜಿಬಿಯಷ್ಟಾಗುತ್ತದೆ! ಇವರ ಕಂಪ್ಯೂಟರ್‌ನಲ್ಲಿ ಛಾಯಾಚಿತ್ರ ರೂಪದಲ್ಲಿ ಭದ್ರವಾಗಿರುವ ಕೆಲ ಜೀವಿಗಳೂ ಇಂದು ರಾಜ್ಯದಲ್ಲಿ ಎಲ್ಲಿಯೂ ಕಣ್ಣಿಗೆ ಬೀಳುತ್ತಿಲ್ಲ ಎಂಬುದು ವಿಷಾದದ ಸಂಗತಿ.

ಒಬ್ಬನಿಂದ ಏನಾಗುತ್ತೆ ಎಂದು ಕೈಕಟ್ಟಿ ಕೂರದೇ ಈ ದೇಶದ ಪ್ರಜೆಗಳಾಗಿ ನಮ್ಮ ಕರ್ತವ್ಯವನ್ನು ನಾವು ಧೈರ್ಯವಾಗಿ ನಿರ್ವಹಿಸಬೇಕು. ಆಗ ಮಾತ್ರ ಭಾರತೀಯರಾಗಿ ಬದುಕಿದ್ದಕ್ಕೂ ಸಾರ್ಥಕವಾಗುತ್ತದೆ ಎನ್ನುತ್ತಾರೆ ಬಿ.ವಿ.ಗುಂಡಪ್ಪ. ಸಂಪರ್ಕ ಸಂಖ್ಯೆ – 9448617529.

ಕೃಪೆ: ಪ್ರಜಾವಾಣಿ

# ಬರಡು ಭೂಮಿಯಲಿ ಬಹುಬೆಳೆ

ನೆಲದ ಮಾತು

ಇದು ನಾಲ್ಕು ವರ್ಷದ ಹಿಂದೆ ಕಲ್ಲು ಭೂಮಿ. ಈಗ ಗಿಡ–ಮರಗಳ ಹಸಿರು ತೋಟ ಮಾತ್ರವಲ್ಲದೇ ವೈವಿಧ್ಯ ಜೀವಸಂಕುಲಗಳ ತಾಣವೂ ಹೌದು. ಕೃಷಿ ಮಾಡುವ ಮನಸ್ಸಿದ್ದರೆ ಬರಡು ಭೂಮಿಯಲ್ಲೂ ಬಂಗಾರ ಬೆಳೆಯಬಹುದು ಎಂದು ರಾಣೆಬೆನ್ನೂರು ತಾಲ್ಲೂಕಿನ ಬುಡಪನಹಳ್ಳಿ ಗ್ರಾಮದ ಪಂಚಾಕ್ಷರಯ್ಯ ರುದ್ರದೇವರಮಠ ತೋರಿಸಿಕೊಟ್ಟಿರುವ ಪರಿ ಇದು. ರಾಣೆಬೆನ್ನೂರು ಕೇಂದ್ರದಿಂದ ಸನಿಹದಲ್ಲಿರುವ ಇವರ ಕರ್ಮಭೂಮಿಯಲ್ಲೀಗ ಹಸಿರು ಚಿಮ್ಮಿದೆ.

ಸುಸ್ಥಿರ ಆದಾಯದ ಮೂಲ ಕೇಂದ್ರ ಬಿಂದು ಬಹುಬೆಳೆ ಪದ್ಧತಿ. ಈ ಪದ್ಧತಿಯಲ್ಲಿ ನಿರಂತರವಾಗಿ ಕೆಲಸದ ಜೊತೆ ಆದಾಯವೂ ಸಿಗುತ್ತದೆ ಎಂಬುದು ಇವರ ನಿಲುವು. ಆ ದಿನಗಳಲ್ಲೇ ವಿಜ್ಞಾನ ಪದವಿಯನ್ನು ಪಡೆದುಕೊಂಡವರು ಪಂಚಾಕ್ಷರಯ್ಯ. ಸರ್ಕಾರಿ ನೌಕರಿಯ ಸಹವಾಸ ಬೇಡವೆಂದು ಕೃಷಿಯನ್ನು ಆರಂಭಿಸಿದರು. ಆದರೆ ತಮ್ಮಲ್ಲಿದ್ದ 10 ಎಕರೆ ಕಲ್ಲು ಭೂಮಿಯಲ್ಲಿ ಕೃಷಿ ಮಾಡುವುದು ಹೇಗೆ ಎಂಬ ಚಿಂತೆ ಕಾಡಿತು. ಅವರ ಈ ಚಿಂತೆಯನ್ನು ಪರಿಹರಿಸಿದವರು ಹಾವೇರಿಯ ಶಿವಾನಂದಪ್ಪ ಎನ್ನುವ ಕೃಷಿಕ. ಸುಸ್ಥಿರ ತೋಟಗಾರಿಕಾ ಕೃಷಿ ಮಾಡುವಂತೆ ಸೂಚಿಸಿ ಪೂರಕ ತಾಂತ್ರಿಕ ಸಲಹೆ ನೀಡಿದರು. ಆ ಸಲಹೆಯಂತೆ ನಡೆದುದೇ ಇಂದೀಗ ಕಲ್ಲುಮುಳ್ಳು ಇದ್ದ ಜಾಗದಲ್ಲೆಲ್ಲಾ ಹಸಿರಿನ ಸಿರಿ ಹರಿದಿದೆ.

ಇವರು ಒತ್ತು ನೀಡಿರುವುದು ತೋಟಗಾರಿಕಾ ಬೆಳೆಗಳಿಗೆ. ಪೇರಳೆ, ಸಪೋಟ, ನಿಂಬೆ, ಮಾವು, ಕರಿಬೇವು ಇತ್ಯಾದಿ ಬೆಳೆಗಳನ್ನು ಬೆಳೆಸಿದ್ದಾರೆ. 'ತೋಟಗಾರಿಕಾ ಬೆಳೆಗಳಿಂದ ಕಾರ್ಮಿಕರ ಸಮಸ್ಯೆ ಬಂದಿಲ್ಲ. ಆರಂಭದ ನಾಲ್ಕು ವರ್ಷ ತೋಟಗಾರಿಕಾ ಬೆಳೆಗಳನ್ನು ಚೆನ್ನಾಗಿ ನೋಡಿಕೊಂಡರೆ ಮುಂದಿನ 30–40 ವರ್ಷ ನಿರಂತರ ಆದಾಯ ಬರುತ್ತದೆ. ಹಾಗಾಗಿ ತೋಟಗಾರಿಕೆ ಬೆಳೆಗಳಿಗೆ ಒತ್ತು ನೀಡಲಾಗಿದೆ. ನೀರನ್ನು ಮಿತವಾಗಿ ಬಳಸಬೇಕು ಎನ್ನುವ ಕಾರಣಕ್ಕಾಗಿ ಹನಿ ನೀರಾವರಿ ಅಳವಡಿಸಿದೆ' ಎನ್ನುತ್ತಾರೆ ಪಂಚಾರಕ್ಷಯ್ಯ. ವರ್ಷದಲ್ಲಿ ಎರಡು ಸಲ ಸಾವಯವ ಗೊಬ್ಬರವನ್ನು ಪ್ರತಿ ಗಿಡಕ್ಕೆ ನೀಡುತ್ತಾರೆ. ತಿಪ್ಪೆಗೊಬ್ಬರ ಸಹಾ ಹಾಕುತ್ತಾರೆ. ಕಸಿ ಗಿಡಗಳನ್ನು ನಾಟಿ ಮಾಡಲು ವೈಜ್ಞಾನಿಕ ಅಳತೆಯೊಂದಿಗೆ ಗುಂಡಿ ತೋಡಿ, ಅದಕ್ಕೆ ಬೇವಿನಹಿಂಡಿ ಹಾಗೂ ತಿಪ್ಪೆಗೊಬ್ಬರ ಹಾಕಿದ್ದಾರೆ.

**ಬಹುಬೆಳೆ ಪದ್ಧತಿಯ ಪ್ರಯೋಗ:** ತೋಟಗಾರಿಕೆ ಬೆಳೆಯೊಂದಿಗೆ, ಕೃಷಿ ಬೆಳೆಯನ್ನೂ ಬಹುಬೆಳೆ ಪದ್ಧತಿ ಅನುಸರಿಸಿ ಬೆಳೆಯುತ್ತಿದ್ದಾರೆ. ಅರ್ಧ ಎಕರೆಯಲ್ಲಿ ಏಕದಳ ಮೇವು ಹಾಗೂ ಇನ್ನುಳಿದ ಅರ್ಧ ಎಕರೆಯಲ್ಲಿ ಅಲಸಂದೆ ಬೆಳೆದಿದ್ದಾರೆ. ಸಪೋಟ ತೋಟಗಾರಿಕೆ ಬೆಳೆಯೊಂದಿಗೆ ಮೆಣಸಿನಕಾಯಿ, ಸೊಪ್ಪಿನ ತರಕಾರಿ, ಈರುಳ್ಳಿ ಹಾಗೂ ಅಲಸಂದೆ ಮಿಶ್ರಬೆಳೆ ಬೆಳೆದಿದ್ದಾರೆ. ಹೊಲದ ಸುತ್ತಲೂ ವಿವಿಧ ಬಗೆಯ ಕಾಡುಮರಗಳನ್ನು ಬೆಳೆಸಿದ್ದಾರೆ. ನೈಸರ್ಗಿಕವಾಗಿ ಬೆಳೆದ ಮರಗಳನ್ನು ಕಡಿದಿಲ್ಲ. 'ಮರಗಳು ಕೃಷಿಗೆ ಪೂರಕ. ಹಾಗಾಗಿ ಹೆಚ್ಚು ಮರಗಳು ಇದ್ದರೆ ಕೃಷಿ ಸುಸ್ಥಿರ ಆಗುತ್ತದೆ' ಎಂಬುದು ಅವರ ಅಭಿಮತ.

ಕಳೆದ ಮೂರು ವರ್ಷಗಳಲ್ಲಿ ಪೇರಳೆ ಹಣ್ಣಿನಿಂದ 38 ಸಾವಿರ ರೂಪಾಯಿ ಇಳುವರಿ ಬಂದಿದೆ. ತಮಗೆ ಬೇಕಾದ ಬೇಳೆ–ಕಾಳುಗಳನ್ನು ಸ್ವತಃ ಬೆಳೆದುಕೊಳ್ಳುತ್ತಾರೆ. ಅದರಿಂದಲೂ ವರ್ಷಕ್ಕೆ ನಾಲ್ಕೈದು ಸಾವಿರ ಆದಾಯ ಬರುತ್ತದೆ ಎಂಬ ಲೆಕ್ಕಾಚಾರ ಅವರದ್ದು. 'ಬಹುಬೆಳೆ ಪದ್ಧತಿ ಆರಂಭ ಮಾಡಿ ನಾಲ್ಕು ವರ್ಷ ಕಳೆದಿದೆ. ಅಲ್ಪ ಆದಾಯವೂ ಬಾರದ ಭೂಮಿ ಈಗ ವರ್ಷಕ್ಕೆ ಅರವತ್ತು ಸಾವಿರ ಆದಾಯ ಬರುವಷ್ಟು ಸದೃಢ ಆಗಿದೆ. ಇನ್ನು ನಾಲ್ಕು ವರ್ಷ ಕಳೆದರೆ ಸುಮಾರು ಒಂದು ಲಕ್ಷ ಆದಾಯ ಗ್ಯಾರಂಟಿ. ಸಮಯಕ್ಕೆ ಸರಿಯಾಗಿ ಸಾವಯವ ಔಷಧೋಪಚಾರ ನಿಂತಿಲ್ಲ. ಏನಾದರೂ ಪೀಡೆ/ರೋಗ ಬಾಧೆ ಬಂದರೆ ತಜ್ಞರ ಸಲಹೆ ಪಡೆಯುತ್ತೇನೆ' ಎನ್ನುತ್ತಾರೆ ಪಂಚಾಕ್ಷರಯ್ಯ. ಬರಡು ಭೂಮಿಯಲ್ಲಿ ಸುಸ್ಥಿರ ಪ್ರಗತಿ ಸಾಧಿಸಲು ಬಂಡವಾಳ ಕಡಿಮೆ ಬೇಡುವ ಸಾವಯವ ಬೆಳೆ ಪದ್ಧತಿ, ಸೂಕ್ತ ಬೆಳೆ ಆಯ್ಕೆ ಹಾಗೂ ನಿರಂತರ ಪರಿಶ್ರಮ ಅವಶ್ಯಕ ಎಂಬುವುದು ಅವರ ಮಾತು. ಸಂಪರ್ಕಕ್ಕೆ 99002 01907 (ಸಂಜೆ ವೇಳೆ)



**ಹರಿದ್ವಾರದಲ್ಲಿನ ದೇವ ಸಂಸ್ಕೃತಿ ವಿಶ್ವವಿದ್ಯಾಲಯದಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯೋರ್ವ ಬರೋಬ್ಬರಿ 90 ನಿಮಿಷಗಳ ಕಾಲ ಶಿರ್ಷಾಸನ ಯೋಗ ಪ್ರದರ್ಶನ ಮಾಡಿ ಯಶಸ್ವಿಯಾಗಿದ್ದು, ನೂತನ ದಾಖಲೆ ನಿರ್ಮಿಸಿದ್ದಾರೆ. ವಿವಿಯಲ್ಲಿ ಅಂತಿಮ ವರ್ಷದ ಬಿಎಸ್‌ಸಿಯಲ್ಲಿ ವಿದ್ಯೆಆಭ್ಯಾಸ ನಡೆಸುತ್ತಿರುವ ಆದಿತ್ಯ ಪ್ರಕಾಶ್ ಸಿಂಗ್ ಈ ದಾಖಲೆ ಮಾಡಿದ್ದಾರೆ. ವಿದ್ಯಾರ್ಥಿಯ ಸಾಧನೆ ಗಿನ್ನಿಸ್ ಹಾಗೂ ಲಿಮ್ಕಾ ದಾಖಲೆಗೆ ಸೇರ್ಪಡೆಯಾಗುವ ಸಾಧ್ಯತೆಯಿದೆ. ಗಿನ್ನಿಸ್ ರೆಕಾರ್ಡ್‌ನ ಮಾಹಿತಿ ಪ್ರಕಾರ ಈ ದಾಖಲೆ ದುಬೈನ ಐವರ್ ಸ್ಟ್ಯಾನ್ಲಿ ಎಂಬವರ ಹೆಸರಿನಲ್ಲಿದೆ. ಅವರು 61 ನಿಮಿಷಗಳ ಕಾಲ ಶಿರ್ಷಾಸನ ಮಾಡುವ ಮೂಲಕ ದಾಖಲೆ ನಿರ್ಮಿಸಿದ್ದರು. ಈ ದಾಖಲೆಯನ್ನು ಅಳಿಸಿರುವ ಆದಿತ್ಯ ಪ್ರಕಾಶ್ ಸಿಂಗ್ ನೂತನ ದಾಖಲೆ ಬರೆದಿರುವುದಾಗಿ ತಿಳಿಸಿದ್ದಾರೆ. ಆದಿತ್ಯ ಪ್ರಕಾಶ್ ಸಿಂಗ್ ಮೂಲತಃ ಉತ್ತರ ಪ್ರದೇಶದ ಗೋರಕ್‌ಪುರದವರಾಗಿದ್ದು, 2013ರಲ್ಲಿ ವಿವಿಗೆ ದಾಖಲಾಗಿದ್ದರು.**

**ಸಂಪಾದಕೀಯ ಸಹಕಾರ** **ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್**




ದೇಶದ ರಕ್ಷಣಾ ಸಂಶೋಧನಾ ಸಂಸ್ಥೆ ಡಿಆರ್‌ಡಿಒ (ಡಿಫೆನ್ಸ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್) ಲಡಾಕ್ ಪ್ರದೇಶದ ಚಾಂಗ್ಲಾ ಪರ್ವತದ ಮೇಲೆ ಸಮುದ್ರ ಮಟ್ಟದಿಂದ 17,500 ಅಡಿ ಎತ್ತರದಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಿ ವಿಶ್ವದಾಖಲೆಗೆ ಪಾತ್ರವಾಗಿದೆ. ಡಿಆರ್‌ಡಿಒ ಹೆಚ್ಚು ಎತ್ತರದ ಪ್ರದೇಶಗಳಲ್ಲಿ ಬಳಕೆ ಮಾಡಲು ಅಭಿವೃದ್ಧಿಪಡಿಸಿರುವ ಹೊಸ ತಾಂತ್ರಿಕತೆಯಾದ ಸೋಲಾರ್ ಶಕ್ತಿಯಿಂದ ಬಿಸಿಯಾಗುವ ಮೇಲ್ಹಾವಣಿಗಳನ್ನೂ ಸಹ ಡಿಆರ್‌ಡಿಒ ಪರೀಕ್ಷೆಗೆ ಒಳಪಡಿಸಲಿದೆ. ಜತೆಯಲ್ಲೇ ಈ ಕೇಂದ್ರದಲ್ಲಿ ಶೀತ ವಲಯ ಮತ್ತು ಶೀತ ಪರಿಸ್ಥಿತಿಗಳಿಗೆ ಅಗತ್ಯವಿರುವ ತಾಂತ್ರಿಕತೆಗಳ ಕುರಿತು ಸಂಶೋಧನೆ ನಡೆಸಲಾಗುವುದು ಎಂದು ಡಿಆರ್‌ಡಿಒನ ಮಹಾ ನಿರ್ದೇಶಕ ಡಾ. ಎಸ್. ಕ್ರಿಸ್ಟೋಫರ್ ತಿಳಿಸಿದ್ದಾರೆ. ಈ ಮೊದಲು ನೇಪಾಳದ ಎವರೆಸ್ಟ್ ಪರ್ವತದ ಬುಡದಲ್ಲಿ 16,500 ಅಡಿ ಎತ್ತರದಲ್ಲಿ ಸ್ಥಾಪಿಸಲಾಗಿರುವ ಪಿರಮಿಡ್ ಲ್ಯಾಬೊರೇಟರಿ ಅತಿ ಎತ್ತರದಲ್ಲಿ ಕಾರ್ಯ ನಿರ್ವಹಿಸುವ ಸಂಶೋಧನಾ ಕೇಂದ್ರ ಎಂಬ ಖ್ಯಾತಿ ಪಡೆದಿತ್ತು. ಡಿಆರ್‌ಡಿಒ ಚಳಿಗಾಲದಲ್ಲಿ –40 ಡಿಗ್ರಿಗೆ ಉಷ್ಣಾಂಶ ಇಳಿಯುವ ಮತ್ತು 17,500 ಅಡಿ ಎತ್ತರದಲಿರುವ ಚಾಂಗ್ಲಾದಲ್ಲಿ ಸಂಶೋಧನಾ ಕೇಂದ್ರ ಸ್ಥಾಪನೆಯೊಂದಿಗೆ ಈ ದಾಖಲೆ ನಿರ್ಮಾಣವಾಗಿದ್ದು, ಅತಿ ಹೆಚ್ಚು ಎತ್ತರದಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಿದ ಮೊದಲ ರಾಷ್ಟ್ರ ಎಂಬ ಗೌರವಕ್ಕೆ ಭಾರತ ಪಾತ್ರವಾಗಿದೆ.



**ಕಪ್ಪುಹಣ ಬಹಿರಂಗಪಡಿಸಲು ಕೇಂದ್ರ ಸರ್ಕಾರವು ಕೊಟ್ಟಿದ್ದ 90 ದಿನಗಳ ಕಾಲಮಿತಿ ಸೆ. 30ಕ್ಕೆ ಕೊನೆಗೊಂಡಿದ್ದು, ಈವರೆಗೆ 638 ಮಂದಿ ಒಟ್ಟು 4,147 ಕೋಟಿ ಮೊತ್ತದ ಕಪ್ಪುಹಣ ಘೋಷಣೆ ಮಾಡಿದ್ದಾರೆ. ಕಪ್ಪು ಹಣ ಘೋಷಿಸುವುದಕ್ಕೆ 2015ರ ಜುಲೈ 1ರಿಂದ ಸೆಪ್ಟೆಂಬರ್ 30ರ ವರೆಗೆ ಗಡುವು ನೀಡಲಾಗಿತ್ತು. ಈ ಅವಧಿಯಲ್ಲಿ ಘೋಷಣೆ ಮಾಡಿದರೆ ಶೇ. 30ರಷ್ಟು ತೆರಿಗೆ ಹಾಗೂ ಅಷ್ಟೇ ಮೊತ್ತದ ದಂಡ ಪಾವತಿಸಬೇಕಾಗಿತ್ತು. ಈ ಅವಧಿಯಲ್ಲಿ ವಿದೇಶಿ ಆಸ್ತಿ ಹಾಗೂ ಕಪ್ಪುಹಣ ಬಹಿರಂಗಪಡಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿತ್ತು. ಆದರೆ, ಅಕ್ಟೋಬರ್ 1ರಿಂದ ಯಾರ ಬಳಿಯಾದರೂ ಕಪ್ಪು ಹಣ ಕಂಡುಬಂದಲ್ಲಿ ಅವರಿಗೆ ಶೇ. 120 ರಷ್ಟು ತೆರಿಗೆ, ದಂಡ ಹಾಗೂ ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಇದೆ. ಕಪ್ಪು ಹಣ ಹಾಗೂ ವಿದೇಶದಲ್ಲಿರುವ ಆಸ್ತಿ ವಿವರ ಬಹಿರಂಗಪಡಿಸದ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎಂದು ಸರ್ಕಾರ ಹೇಳಿದೆ. ಬಹುಪಕ್ಷೀಯ ಸ್ವಯಂಚಾಲಿತ ಮಾಹಿತಿ ವಿನಿಮಯ (ಎಇಒಐ) ಒಪ್ಪಂದ 2017ರಿಂದ ಜಾರಿಗೆ ಬರಲಿದೆ. ಇದರೊಂದಿಗೆ ಜಗತ್ತಿನ ಹಲವು ದೇಶಗಳಿಂದ ತೆರಿಗೆ ಸಂಬಂಧಿ ಮಾಹಿತಿಗಳು ದೊರೆಯಲಿವೆ. ಮಾರ್ಚ್ ವರೆಗಿನ ಮಾಹಿತಿ ಪ್ರಕಾರ, ಭಾರತ ಸೇರಿ 58 ದೇಶಗಳು ಎಇಒಐಗೆ ಸಹಿ ಹಾಕಿವೆ. 2018ರೊಳಗೆ ಇನ್ನೂ 36 ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಲಿವೆ.**

## ಗುಜರಾತ್‌ನ ಲೀಲಾಬೆನ್‌ಗೆ ‘ಮಹಾತಾಯಿ’ ಗೌರವ



**ತಮಗೆ ಸಿಗುತ್ತಿದ್ದ ಚೂರು ಪಾರು ಸಂಬಳದಲ್ಲೇ ತನ್ನ ಮಕ್ಕಳಿಗೆ ಶಿಕ್ಷಣ ನೀಡಿದ ಗುಜರಾತ್‌ನ ಲೀಲಾಬೆನ್ ಛಬಿಲ್‌ದಾಸ್ ಗುರ್ಜಾರ್ (91) ಅವರಿಗೆ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ‘ಮಹಾತಾಯಿ’ ಪ್ರಶಸ್ತಿ ನೀಡಿದರು. ನದೆಹಲಿಯಲ್ಲಿ ನಡೆದ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ರಾಷ್ಟ್ರಪತಿ, ಲೀಲಾಬೆನ್ ಮತ್ತು 104 ವರ್ಷದ ವೃದ್ಧರೊಬ್ಬರೂ ಸೇರಿದಂತೆ 10 ಜನರಿಗೆ ‘ಹಿರಿಯ ನಾಗರಿಕರ ರಾಷ್ಟ್ರೀಯ ಪ್ರಶಸ್ತಿ – 2015’ ಪ್ರದಾನ ಮಾಡಿದರು. ಗುಜರಾತ್‌ನ ಅಹಮದಾಬಾದ್ ಜಿಲ್ಲೆಯ ವೀರಂಗಂ ಗ್ರಾಮದ ಲೀಲಾಬೆನ್ ತಮ್ಮ ಮೊದಲ ಮಗುವಿಗೆ ಜನ್ಮ ನೀಡಿದ್ದು 14ನೇ ವಯಸ್ಸಿನಲ್ಲಿ. ಅವರ ಆರು ಮಕ್ಕಳಲ್ಲಿ ಇಬ್ಬರು ಹೆಣ್ಣುಮಕ್ಕಳು. ಪೌರ ಕಾರ್ಮಿಕಳಾಗಿ ದುಡಿಯುತ್ತಿದ್ದ ಲೀಲಾಬೆನ್, ತಮ್ಮ ಸಂಸಾರದ ಹೊಟ್ಟೆ ಹೊರೆಯಲು ಮಲ ಹೊತ್ತಿದ್ದೂ ಇದೆ. ಚೂರುಪಾರು ದುಡಿಮೆಯಲ್ಲೇ ತಮ್ಮ ಆರೂ ಮಕ್ಕಳನ್ನು ಅವರು ಶಾಲೆಗೆ ಕಳುಹಿಸಿ ಶಿಕ್ಷಣ ನೀಡಿದ್ದಾರೆ. ಅಸ್ಪೃಶ್ಯತೆ ಆಚರಣೆಯಿದ್ದ ಕಾರಣ ಅವರ ಮಕ್ಕಳು ಶಾಲೆಯ ಇತರ ಮಕ್ಕಳೊಂದಿಗೆ ಕೂರಲು ಮತ್ತು ಎಲ್ಲರೂ ಬಳಸುತ್ತಿದ್ದ ನೀರನ್ನು ಕುಡಿಯಲು ಅವಕಾಶವಿರಲಿಲ್ಲ. ಈ ಎಲ್ಲಾ ಸಮಸ್ಯೆಗಳ ಮಧ್ಯೆ ಉನ್ನತ ಶಿಕ್ಷಣ ಪಡೆದ ಲೀನಾಬೆನ್ ಮಕ್ಕಳು ಇದೀಗ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.**




**ಸಣ್ಣ ಉದ್ಯಮಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕಳೆದ ಏಪ್ರಿಲ್‌ನಲ್ಲಿ ಮೋದಿ ಚಾಲನೆ ನೀಡಿರುವ ಮುದ್ರಾ ಯೋಜನೆಯಿಂದ ಈಗಾಗಲೇ 20 ಲಕ್ಷ ಮಹಿಳೆಯರೂ ಸೇರಿದಂತೆ ಒಟ್ಟು 42 ಲಕ್ಷ ಜನರು ಇದರ ಅನುಕೂಲ ಪಡೆದುಕೊಂಡಿದ್ದಾರೆ. ಇದು ಸಬಲೀಕರಣಕ್ಕೆ ಪ್ರಮುಖ ಅಸ್ತ್ರವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.**

## ನಾಲುದ್ದದ ಸುದ್ದಿಗಳು



ಸ್ವದೇಶಿ ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿರುವ ಐಎನ್‌ಎಸ್ ಕೊಚ್ಚಿ ಯುದ್ಧನೌಕೆಯನ್ನು ಇತ್ತೀಚೆಗೆ ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಅವರು ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಸಂಪೂರ್ಣ ಸ್ವದೇಶಿ ತಂತ್ರಜ್ಞಾನದಿಂದ ನಿರ್ಮಾಣವಾಗಿರುವ ಐಎನ್‌ಎಸ್ ಕೊಚ್ಚಿ ವಿದೇಶಿ ಯುದ್ಧನೌಕೆಗಳಷ್ಟೇ ಸಶಕ್ತವಾಗಿದೆ. ಐಎನ್‌ಎಸ್ ಕೊಚ್ಚಿ 7500 ಟನ್ ತೂಕವಿದ್ದು, 164 ಮೀಟರ್ ಉದ್ದ, 17 ಮೀಟರ್ ಅಗಲವಿದೆ. 4 ಗ್ಯಾಸ್ ಟರ್ಬೆನ್, 30 ನಾಟಿಕಲ್ ಮೈಲಿ ವೇಗದಲ್ಲಿ ಚಲಿಸುತ್ತದೆ. 40 ಅಧಿಕಾರಿಗಳು ಮತ್ತು 350 ಸೈನಿಕರು ಪ್ರಯಾಣಿಸಲು ಅವಕಾಶವಿದೆ. ಇದರಲ್ಲಿ ಬ್ರಹ್ಮೋಸ್, 76 ಎಂಎಂ ಸೂಪರ್ ರ‍್ಯಾಪಿಡ್ ಗನ್ ಮೌಂಟ್, ಎ.ಕೆ. 630, ಕ್ಲೋಸ್ ಇನ್ ವೆಪನ್ ಸಿಸ್ಟಮ್ ಮತ್ತಿತರ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಬಹುದಾಗಿದೆ. ಆಕಾಶ, ಭೂಮಿ ಹಾಗೂ ಸಮುದ್ರ ಮೂರೂ ಗುರಿಗಳ ಮೇಲೆ ದಾಳಿ ನಡೆಸುವ ಸಾಮರ್ಥ್ಯ ಇದಕ್ಕಿದೆ.




**ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 125ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಅವರ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದೆ. ಅಂಬೇಡ್ಕರ್ ಹೆಸರಿನಲ್ಲಿ ವಿಶೇಷ ನಾಣ್ಯವನ್ನು ಹೊರತರಲು ಕೇಂದ್ರ ಸರ್ಕಾರ ನಿರ್ಧರಿಸಿರುವುದಾಗಿ ಕೇಂದ್ರ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ತಿಳಿಸಿದರು.**

ಭಾರತದಲ್ಲಿ 2.68 ಕೋಟಿ ಅಂಗವಿಕಲರಿದ್ದಾರೆ. ದೇಶದ 4800 ಪ್ರಮುಖ ಸರ್ಕಾರಿ ಕಟ್ಟಡಗಳು, ಎಲ್ಲಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು, 75 ರೈಲು ನಿಲ್ದಾಣಗಳು, ಸಾರ್ವಜನಿಕ ಸಾರಿಗೆಯ 25% ವಾಹನಗಳು ಮತ್ತು 3000 ಸಾರ್ವಜನಿಕ ಸೇವೆಯ ವೆಬ್‌ಸೈಟ್‌ಗಳನ್ನು 2016ರ ಜುಲೈ ಒಳಗಾಗಿ ವಿಕಲಾಂಗರ ಸ್ನೇಹಿಯಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಸರ್ಕಾರಿ ಮಾಹಿತಿಗಳನ್ನು ಒದಗಿಸುವ 6000 ವೆಬ್‌ಸೈಟ್‌ಗಳ ಪೈಕಿ ಪಾಸ್‌ಪೋರ್ಟ್ ಸೇವೆ ಒದಗಿಸುವ ವೆಬ್‌ಸೈಟ್ ಸೇರಿದಂತೆ 3000 ವೆಬ್‌ಸೈಟ್‌ಗಳನ್ನು ವಿಕಲಾಂಗ ಸ್ನೇಹಿಗೊಳಿಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಅಂಗವಿಕಲ ಸ್ನೇಹಿ ವಾತಾವರಣ, ಸಾರಿಗೆ, ಮಾಹಿತಿ ಮತ್ತು ಸಂಪರ್ಕ ಎಂದು ಈ ಅಭಿಯಾನವನ್ನು ಮೂರು ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಮೇಲ್ವಿಚಾರಣೆಯಲ್ಲಿ ಈ ಅಭಿಯಾನ ನಡೆಯಲಿದೆ.

**ಭಾರತದ ರಕ್ಷಣಾ ವ್ಯವಸ್ಥೆ ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಅಮೆರಿಕ ಕಂಪನಿಗಳಿಂದ 16,482 ಕೋಟಿ ರೂ. ಮೊತ್ತದ ರಕ್ಷಣಾ ಸಾಮಗ್ರಿ ಖರೀದಿಸುವ ಮಹತ್ತ್ವದ ನಿರ್ಧಾರ ಕೈಗೊಂಡಿದೆ. 2013ರಿಂದಲೂ ನನೆಗುದಿಗೆ ಅಮೆರಿಕದಿಂದ ರಕ್ಷಣಾ ಸಾಮಗ್ರಿ ಖರೀದಿಸುವ ಪ್ರಸ್ತಾವನೆಗೆ ಇದೀಗ ಚಾಲನೆ ಸಿಕ್ಕಿದ್ದು, ಜೂನ್‌ನಲ್ಲಿ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಭಾರತ ಭೇಟಿ ಸಂದರ್ಭದಲ್ಲಿ ಒಪ್ಪಂದವನ್ನು ಅಂತಿಮಗೊಳಿಸಲಾಗಿತ್ತು. ಅಮೆರಿಕದ ವಿಮಾನಯಾನ ಕಂಪನಿ ಬೋಯಿಂಗ್‌ನಿಂದ 22 ಅಪಾಚೆ ಹಾಗೂ 15 ಚಿನೂಕ್ ಹೆವಿಲಿಫ್ಟ್ ಹೆಲಿಕಾಪ್ಟರ್‌ಗಳ ಜತೆಗೆ ಶಸ್ತ್ರಾಸ್ತ್ರ ಮತ್ತು ರಾಡಾರ್‌ಗಳನ್ನು ಖರೀದಿಸಲೂ ಕೇಂದ್ರ ಸರ್ಕಾರ ನಿರ್ಧರಿಸಿದೆ.**


ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಮೇಲೆ ಮುದ್ರಿತವಾಗುವ ‘ತಂಬಾಕು ಹಾನಿಕಾರಕ’ ಎಂಬ ಸೂಚನೆ ಒಳಗೊಂಡ ಚಿತ್ರದ ಗಾತ್ರವು 2016ರ ಏಪ್ರಿಲ್ 1ರಿಂದ ಇನ್ನಷ್ಟು ದೊಡ್ಡದಾಗಲಿದೆ. ಸೆಪ್ಟೆಂಬರ್ 9ರಂದು ಈ ಕುರಿತು ವಿಚಾರಣೆ ನಡೆಸಿದ ರಾಜಸ್ತಾನ ಹೈಕೋರ್ಟ್, ಎಚ್ಚರಿಕೆ ಚಿತ್ರದ ಗಾತ್ರ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವನ್ನು ಸೆ. 29ರ ಒಳಗೆ ಸ್ಪಷ್ಟಪಡಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಪ್ರಸ್ತುತ ತಂಬಾಕು ಉತ್ಪನ್ನಗಳ ಪೊಟ್ಟಣಗಳ ಶೇ. 40ರಷ್ಟು ಭಾಗದಲ್ಲಿ ಎಚ್ಚರಿಕೆ ಸಂದೇಶಗಳನ್ನು ಮುದ್ರಿಸಲಾಗುತ್ತಿದೆ. ಮುಂದಿನ ಏಪ್ರಿಲ್ 1ರಿಂದ ಈ ಸಂದೇಶಗಳು ಪೊಟ್ಟಣದ ಶೇ. 85ರಷ್ಟು ಭಾಗವನ್ನು ಆವರಿಸಿಕೊಳ್ಳಲಿವೆ ಎಂದು ಆರೋಗ್ಯ ಸಚಿವಾಲಯ ಸುತ್ತೋಲೆ ಹೊರಡಿಸಿದೆ. ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ನಿಯಮ 2008ರ ಅನ್ವಯ 2015ರ ಏಪ್ರಿಲ್ 1ರಿಂದಲೇ ಎಚ್ಚರಿಕೆ ಚಿತ್ರಗಳ ಗಾತ್ರ ಶೇ 85ರಷ್ಟಾಗಬೇಕಿತ್ತು. ಈ ಸಂಬಂಧ ಸಂಸದೀಯ ಸಮಿತಿ ಅಧ್ಯಯನ ನಡೆಸುತ್ತಿದ್ದ ಕಾರಣ ನಿಯಮ ಜಾರಿಯನ್ನು ಸರ್ಕಾರ ಮುಂದೂಡಿತ್ತು.




## ದೇಸೀ ಗೋ ತಳಿಗಳ ಸಂರಕ್ಷಣೆ, ಕೇಂದ್ರಕ್ಕೆ ನೋಟೀಸ್



ರಾಷ್ಟ್ರಾದ್ಯಂತ ದೇಶೀಯ ಗೋವು ಸಂರಕ್ಷಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಕೇಂದ್ರ ಸರ್ಕಾರದ ಕೃಷಿ ಸಚಿವಾಲಯಕ್ಕೆ ನೋಟಿಸ್ ಜಾರಿ ಮಾಡಿದ್ದು, ಅಕ್ಟೋಬರ್ 30ರ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಪ್ರಕರಣ ಸಂಬಂಧ ವಕೀಲ, ಪರಿಸರತಜ್ಞ ಅಶ್ವಿನಿ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಧೀಶರಾದ ಯು.ಡಿ. ಸಾಲ್ವಿ ಅವರು ಒಂದು ತಿಂಗಳೊಳಗೆ ದೇಶೀಯ ಗೋವು ಸಂರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಉತ್ತರ ನೀಡಿ ಎಂದು ಹೇಳಿದ್ದಾರೆ. ಅಭಿವೃದ್ಧಿ ಪರ ರಾಷ್ಟ್ರಗಳು ಇಂದು ದೇಸೀ ತಳಿಯಗಳ ಸಂರಕ್ಷಣೆಗೆ ಸಂಬಂಧಿಸಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ ಎಂದು ಅರ್ಜಿಯಲ್ಲಿ ಬರೆದಿದ್ದರು. ಅಲ್ಲದೆ, ಇಂಥ ತಳಿಗಳಿಂದ ಪರಿಸರ ಸಂರಕ್ಷಣೆಯೂ ಸಾಧ್ಯ ಎನ್ನುವ ವಾದ ಮುಂದಿಟ್ಟಿದ್ದರು.



ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ)ಯು ಇತ್ತೀಚೆಗೆ ಖಗೋಳ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡುವ ಬಾಹ್ಯಾಕಾಶ ವೀಕ್ಷಣಾಲಯ ‘ಆಸ್ಟ್ರೊಸ್ಯಾಟ್’ ಉಡಾವಣೆ ಮಾಡಿದ್ದು, ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ‘ಆಸ್ಟ್ರೊಸ್ಯಾಟ್’ ಜತೆ ಅಮೆರಿಕದ ನಾಲ್ಕು ಉಪಗ್ರಹಗಳು, ಸಾಗರಯಾನ ಸರ್ವೇಕ್ಷಣೆಗೆ ಸಂಬಂಧಿಸಿದ ಇಂಡೋನೇಷ್ಯಾ ಹಾಗೂ ಕೆನಡಾದ ಪುಟ್ಟ ಉಪಗ್ರಹಗಳೂ ಸೇರಿದಂತೆ ಒಟ್ಟು ಆರು ಚಿಕ್ಕ ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದೆ. ಈವರೆಗೆ 20 ವಿವಿಧ ದೇಶಗಳ 51 ಉಪಗ್ರಹಗಳನ್ನು ಇಸ್ರೊ ಉಡಾವಣೆ ಮಾಡಿದೆ. ಇಸ್ರೊದ ವಿಶ್ವಾಸಾರ್ಹ ಧ್ರುವಗಾಮಿ ಉಡಾವಣಾ ವಾಹನ ‘ಪಿಎಸ್‌ಎಲ್‌ವಿ–ಸಿ30’ಯು 1,513 ಕೆ.ಜಿ. ತೂಕದ ಉಪಗ್ರಹವನ್ನು ಧ್ರುವಗಾಮಿ ಕಕ್ಷೆಯಲ್ಲಿ ಕೂರಿಸಿತು. ಇದು ಪಿಎಸ್‌ಎಲ್‌ವಿಯ 30ನೇ ಯಶಸ್ವಿ ಉಡಾವಣೆಯಾಗಿದೆ. ಈ ಯಶಸ್ವೀ ಉಡಾವಣೆಯೊಂದಿಗೆ ಬಾಹ್ಯಾಕಾಶ ವೀಕ್ಷಣಾಲಯ ಉಡಾವಣೆ ಮಾಡಿರುವ ಅಮೆರಿಕ, ಜಪಾನ್, ರಷ್ಯಾ ಮತ್ತು ಯುರೋಪ್ ನಂತಹ ಪ್ರತಿಷ್ಠಿತ ದೇಶಗಳ ಸಾಲಿಗೆ ಭಾರತ ಸೇರಿದೆ. ‘ಆಸ್ಟ್ರೊಸ್ಯಾಟ್’ ಭೂಮಿಯಿಂದ 650 ಕಿ.ಮೀ. ಎತ್ತರದಲ್ಲಿರುವ ಕಕ್ಷೆಯಲ್ಲಿ ಸುತ್ತುಹಾಕುತ್ತಿದ್ದು.



ಜಾರ್ಖಂಡ್ ರಾಜ್ಯದ ಖುಂಟೀ ಜಿಲ್ಲಾ ನ್ಯಾಯಾಲಯದ ಮೇಲ್ಚಾವಣಿಯಲ್ಲಿ ಅಳವಡಿಸಿರುವ 180 ಕಿಲೋ ವ್ಯಾಟ್ ಸಾಮರ್ಥ್ಯ ಸೌರಘಟಕವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಕ್ಟೋಬರ್ 2ರಂದು (ಮಹಾತ್ಮಾ ಗಾಂಧೀಜಿಯವರ ಜಯಂತಿಯಂದು) ಉದ್ಘಾಟಿಸಿದರು. ಈ ಮೂಲಕ ಖುಂಟೀ ಜಿಲ್ಲಾ ನ್ಯಾಯಾಲಯ ಸೌರವಿದ್ಯುತ್‌ನ್ನು ಬಳಸಿದ ಮೊದಲ ನ್ಯಾಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಾರ್ಖಂಡ್‌ನಲ್ಲಿ ಅಗಾಧವಾದ ಕಲ್ಲಿದ್ದಲಿನ ಸಂಗ್ರಹವಿದ್ದರೂ ಕೂಡಾ ಸೌರವಿದ್ಯುತ್‌ಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ. ನಮ್ಮ ಪೂರ್ವಜರು ಯಾವತ್ತೂ ಪರಿಸರ ನಾಶಕ್ಕೆ ಒತ್ತು ನೀಡುತ್ತಿರಲಿಲ್ಲ. ಪರಿಸರ ಉಳಿಸುವುದಕ್ಕಾಗಿ ಅವರ ಕೊಡುಗೆ ನೀಡಿದ್ದರು. ಹೀಗಾಗಿ ನಾವು ಕೂಡಾ ಸ್ವಚ್ಛ ಸುಂದರ ಪರಿಸರಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಅಗತ್ಯವಿದೆ ಎಂದ ಮೋದಿ, ಕರೆಂಟ್ ಬಿಲ್ ಕಡಿತದ ಉದ್ದೇಶದಿಂದ ಎಲ್‌ಇಡಿ ಬಲ್ಬ್‌ಗಳನ್ನು ಬಳಸುವಂತೆ ಜನರಿಗೆ ಕರೆ ನೀಡಿದರು.

2008ರ ಬೆಂಗಳೂರು ಸರಣಿ ಸ್ಫೋಟದ ಪ್ರಮುಖ ಆರೋಪಿ ಹಾಗೂ ಕೇರಳ ಮೂಲದ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ಮುಖಂಡ ಅಬ್ದುಲ್ ನಾಸಿರ್ ಮದನಿ ವಿರುದ್ಧ ಬಾಕಿ ಇರುವ ಭಯೋತ್ಪಾದನಾ ಪ್ರಕರಣಗಳ ಪೂರ್ಣ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್ ಕರ್ನಾಟಕ ಸರ್ಕಾರಕ್ಕೆ ಸೂಚಿಸಿದೆ. ಬಾಕಿ ಪ್ರಕರಣಗಳ ಮಾಹಿತಿ ಒದಗಿಸುವಂತೆ ಮದನಿಗೂ ಸರ್ವೋಚ್ಚ ನ್ಯಾಯಾಲಯ ಸೂಚಿಸಿದೆ.

**ವಿಶ್ವಸಂಸ್ಥೆ ಭದ್ರತಾ ಮಂಡಳಿಯನ್ನು ಪುನರ್‌ರಚಿಸುವುದರ ಜತೆಗೆ ಅದರಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ಕೊಡಬೇಕು. ಆಗ ಮಾತ್ರ ವಿಶ್ವಸಂಸ್ಥೆ ಬಗೆಗಿನ ವಿಶ್ವಾಸ ಮತ್ತಷ್ಟು ಹೆಚ್ಚಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಸಂಸ್ಥೆಯನ್ನು ಆಗ್ರಹಿಸಿದ್ದಾರೆ. ಇತ್ತೀಚೆಗೆ ಬಡತನ ನಿರ್ಮೂಲನೆ, ಅಸಮಾನತೆ ನಿವಾರಣೆ ಮತ್ತು ಹವಾಮಾನ ಬದಲಾವಣೆ ವಿರುದ್ಧ ಹೋರಾಟಕ್ಕಾಗಿ 15 ವರ್ಷಗಳ ನೀಲನಕ್ಷೆ ವಿಷಯ ಕುರಿತ ವಿಶ್ವಸಂಸ್ಥೆಯ ಶೃಂಗ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂಪ್ರದಾಯಶೀಲ ರಾಷ್ಟ್ರವಾಗಿದ್ದರೂ ಭಾರತ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಕಾರ್ಯನೀತಿಗಳನ್ನು ಅಳವಡಿಸಿಕೊಳ್ಳುವಲ್ಲಿ ಎಂದೂ ಹಿಂದೆ ಬಿದ್ದಿಲ್ಲ ಎಂದು ಅಭಿಪ್ರಾಯಪಟ್ಟರು.**

ಪುಂಗವ PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-10-2015



# ಬದಲಾವಣೆಗೆ ಮುನ್ನುಡಿ ಬರೆದ ಸ್ವಚ್ಛ ಭಾರತ

**2019ಕ್ಕೆ ಮಹಾತ್ಮಗಾಂಧಿಯವರ 150ನೇ ಜನ್ಮ ದಿನಾಚರಣೆ ಸಂದರ್ಭ ಭಾರತ ಕಸಮುಕ್ತವಾಗಬೇಕು ಎಂಬ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಸ್ವಚ್ಛ ಭಾರತ ಅಭಿಯಾನವನ್ನು ಆರಂಭಿಸಿದ್ದರು. ಒಂದು ವರ್ಷದ ಹಿಂದೆ ಪ್ರಧಾನಿ ನರೇಂದ್ರ ಮೋದಿ ನವದೆಹಲಿಯ ವಾಲ್ಮೀಕಿ ನಗರದಲ್ಲಿ ಬೀದಿಯನ್ನು ಪೊರಕೆ ಹಿಡಿದು ಗುಡಿಸುವ ಮೂಲಕ ದೇಶಾದ್ಯಂತ ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದ್ದರು. ಇದೀಗ ಒಂದು ವರ್ಷ ಪೂರೈಸಿರುವ ಈ ಯೋಜನೆ ಹಲವಾರು ತೊಡಕುಗಳ ಮಧ್ಯೆಯೇ ಮೈಲಿಗಲ್ಲುಗಳನ್ನು ಸಾಧಿಸಿದೆ.**

**ವಿದ್ಯಾರ್ಥಿಗಳ ಮೊಗದಲ್ಲಿ ಮಂದಹಾಸ:** ಈ ಅಭಿಯಾನ ದೇಶಾದ್ಯಂತ ಪ್ರೌಢಶಾಲೆ, ಕಾಲೇಜುಗಳ ವಿದ್ಯಾರ್ಥಿನಿಯರ ಶೈಕ್ಷಣಿಕ ಮಟ್ಟದಲ್ಲಿ ಬಹುದೊಡ್ಡ ಪರಿಣಾಮ ಬೀರಿದೆ. ಶಾಲೆಗಳಲ್ಲಿ ಶೌಚಗೃಹ ನಿರ್ಮಾಣದ ಬಳಿಕ ವಿದ್ಯಾರ್ಥಿನಿಯರ ಹಾಜರಾತಿಯಲ್ಲಿ ಶೇ.11ರಷ್ಟು ಏರಿಕೆಯಾಗಿದೆ. ಸ್ವಚ್ಛ ವಿದ್ಯಾಲಯದಡಿ ದೇಶಾದ್ಯಂತ 4,17,796



ಶೌಚಗೃಹಗಳನ್ನು ನಿರ್ಮಿಸಲಾಗಿದ್ದು, ಒಂದೇ ವರ್ಷದಲ್ಲಿ ಉದ್ದೇಶಿತ ಶೇ. 98ರಷ್ಟು ಗುರಿ ಸಾಧಿಸಲಾಗಿದೆ. ಋತುಮತಿಯರಾದ ಸಂದರ್ಭ ವಿದ್ಯಾರ್ಥಿನಿಯರು ತಿಂಗಳಿಗೆ ಐದು ದಿನ ಶಾಲೆಗೆ ಗೈರಾಗುತ್ತಿದ್ದರು. ದೇಶಾದ್ಯಂತ ಇದರ ಪ್ರಮಾಣವು ಶೇ.23ರಷ್ಟಿತ್ತು. ಶೌಚಗೃಹ ನಿರ್ಮಾಣದ ಬಳಿಕ ಈ ಸಮಸ್ಯೆ ನಿವಾರಣೆಯಾಗಿದೆ. ಮೋದಿ ಕರೆಗೆ ಓಗೊಟ್ಟು ಅನೇಕ ಸಂಸ್ಥೆಗಳು ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿವೆ.


**ದೇಶ ಕಸಮುಕ್ತವಾಗಿಸುವ ಗುರಿ:** ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಸಚಿವಾಲಯದ ಪ್ರಕಾರ, ಕಳೆದೊಂದು ವರ್ಷದಲ್ಲಿ ಗ್ರಾಮೀಣ ಭಾಗದಲ್ಲಿ ಒಟ್ಟು 95.23 ಲಕ್ಷ ಶೌಚಗೃಹಗಳನ್ನು ನಿರ್ಮಿಸಲಾಗಿದೆ.

**ಸ್ವಚ್ಛವಾದವು ಕಚೇರಿಗಳು:** ಭಾರತದ ಇತಿಹಾಸದಲ್ಲೇ ಅತ್ಯಂತ ಬೃಹತ್ ಅಭಿಯಾನಗಳಲ್ಲಿ ಒಂದಾಗಿದ್ದ ಈ ಅಬಿಯಾನದಲ್ಲಿ ಮೊಟ್ಟಮೊದಲ ಬಾರಿಗೆ ಸರ್ಕಾರಿ ಉದ್ಯೋಗಿಗಳು ಕೂಡ ಕೈಜೋಡಿಸಿದ್ದರು. ದೇಶಾದ್ಯಂತ ಸುಮಾರು 30 ಲಕ್ಷಕ್ಕೂ ಅಧಿಕ ಸರ್ಕಾರಿ ಉದ್ಯೋಗಿಗಳು ಕಚೇರಿ ಸುತ್ತಮುತ್ತ ಸ್ವಚ್ಛತೆ ನಡೆಸುವ ಮೂಲಕ ಸುತ್ತಲಿನ ಶುಚಿತ್ವಕ್ಕೆ ಆದ್ಯತೆ ನೀಡಿದರು. ವಿಶೇಷವಾಗಿ ಶಾಲಾ ಮಕ್ಕಳು, ಕಾಲೇಜು ವಿದ್ಯಾರ್ಥಿಗಳಲ್ಲೂ ಈ ಅಭಿಯಾನ ಹೊಸ ಸಂಚಲನ ಮೂಡಿಸಿದ್ದು ವಿಶೇಷ.

**ಅಸ್ಸಿಘಾಟ್ ಕ್ಲೀನ್‌ಕ್ಲೀನ್:** ಈ ಯೋಜನೆಯ ಫಲವಾಗಿ ಮೋದಿ ಅವರ ಸ್ವಕ್ಷೇತ್ರ ವಾರಾಣಸಿ ನಗರದ 84 ಘಾಟ್‌ಗಳಲ್ಲಿ ಪ್ರಮುಖವಾಗಿದ್ದ ಅಸ್ಸಿಘಾಟ್ ಶುಚಿತ್ವದಿಂದಲೇ ವಿಶ್ವವ್ಯಾಪಿ ಸುದ್ದಿಮಾಡಿದೆ. ಹಸಿತ್ಯಾಜ್ಯ, ಬೀಡಾದ ಕಲೆಗಳು, ದೇವಸ್ಥಾನಗಳ ಪೂಜೆ ಕಸಕಡ್ಡಿಗಳಿಂದಲೇ ತುಂಬಿ ಹೋಗಿತ್ತು. ಒಂದೇ ವರ್ಷದಲ್ಲಿ ಇಲ್ಲಿನ ಚಿತ್ರಣವೂ ಸಂಪೂರ್ಣವಾಗಿ ಬದಲಾಗಿದೆ. ಸಂಪೂರ್ಣವಾಗಿ ಕಸಮುಕ್ತವಾಗಿದ್ದು, ಶೌಚಾಲಯಗಳ ನಿರ್ಮಾಣ ಮಾಡಲಾಗಿದೆ.


**ಸೈನಿಕರಿಂದ ಜಾಗೃತಿ:** ಯೋಜನೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಶಸ್ತ್ರ ಸೇನಾಪಡೆಯ ಸಿಬ್ಬಂದಿಯ ತಂಡವೊಂದು ಗಂಗಾನದಿಯಲ್ಲಿ 2800 ಕಿ.ಮೀ. ಈಜಲಿದೆ. ಉತ್ತರಾಖಂಡದ ದೇವ ಪ್ರಯಾಗದಿಂದ ವಿಂಗ್‌ಕಮಾಂಡರ್ ಪರಮವೀರ್ ಸಿಂಗ್ ನೇತೃತ್ವದಲ್ಲಿ ಪ.ಬಂಗಾಳದ ಗಂಗಾ ಸಾಗರ ದವರೆಗೆ ಯೋಧರು ಈಜಲಿದ್ದಾರೆ. ಪ್ರತಿದಿನ ಸುಮಾರು 60 ಕಿ.ಮೀ. ಈಜುವ ಇವರು, ಹರಿದ್ವಾರ, ವಾರಾಣಸಿ ಮತ್ತಿತರೆಡೆ ವಿಶ್ರಾಂತಿ ಪಡೆಯಲಿದ್ದಾರೆ. ಗಂಗಾನದಿಯನ್ನು ಮಲಿನಗೊಳಿಸದಂತೆ ನದಿತೀರದ ಜನರಲ್ಲಿ ಜಾಗೃತಿ ಮೂಡಿಸಲಿದ್ದಾರೆ.

# ಸರ್ವರಿಗೂ ಸಮಬಾಳು : ಆರೆಸ್ಸೆಸ್ ಆಗ್ರಹ



ಸವಾಜದ ಪ್ರತಿಯೋರ್ವ ವ್ಯಕ್ತಿಗೂ ಮುಕ್ತ ದೇವಾಲಯ ಪ್ರವೇಶದ ಅವಕಾಶ, ಸಾರ್ವಜನಿಕವಾಗಿ ಕುಡಿಯುವ ನೀರಿನ ಸಮಾಜ ಹಂಚಿಕೆಯ ವ್ಯವಸ್ಥೆ ಹಾಗೂ ಹಕ್ಕು, ಸ್ಮಶಾನದಲ್ಲಿ ಅಂತ್ಯಕ್ರಿಯೆಗಾಗಿ ಬೇಧರಹಿತ ಸಮಾನ ಅವಕಾಶ ನೀಡಬೇಕೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಆಗ್ರಹಿಸಿದೆ. ಉತ್ತರಾಖಂಡದ ಹರಿದ್ವಾರದಲ್ಲಿ ನಡೆದ ಆರೆಸ್ಸೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು, ಸಮಾಜದ ಸರ್ವಾಂಗೀಣ ಉನ್ನತಿಗಾಗಿ ಸಾಮೂಹಿಕ ಸಹಕಾರ, ಸಾಮೂಹಿಕ ಚಿಂತನೆ ಹಾಗೂ ಪರಸ್ಪರ ಸಾಮರಸ್ಯ ಅತೀವ ಅಗತ್ಯ. ಇದಕ್ಕಾಗಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಜಾತಿ–ಪಂಥಗಳ ಮೇರೆ ಮೀರಿ 'ಸರ್ವರೂ ಸಮಾನರು' ಎಂಬ ಆಶಯದಂತೆ ಬದುಕಿದಲ್ಲಿ ಸಮಾಜದ ಉತ್ಥಾನ ಸುಲಭಸಾಧ್ಯ ಎಂದಿದ್ದಾರೆ. ಗೋಆಧಾರಿತ ಕೃಷಿ, ಸ್ವಾವಲಂಬೀ ಗ್ರಾಮೀಣ ಜೀವನ, ಮನೆಯಲ್ಲಿ ಭಾರತೀಯ ಕೌಟುಂಬಿಕ ಮೌಲ್ಯಗಳ ಪಾಲನೆ ಇತ್ಯಾದಿ ಅಂಶಗಳಿಗೆ ಆದ್ಯತೆ ನೀಡುವ ಮೂಲಕ ಸುಂದರ–ಸುಖೀ ಸಮಾಜದ ಭಾರತೀಯ ಕಲ್ಪನೆಯನ್ನು ಸಾಕಾರಗೊಳಿಸಬಹುದು ಎಂದಿದ್ದಾರೆ ಭಾಗವತ್.

# ನ.ಕೃಷ್ಣಪ್ಪನವರ ಕುರಿತು ಮಾಹಿತಿ ಕೋರಿಕೆ




ಇತ್ತೀಚೆಗೆ ನಮ್ಮನ್ನಗಲಿದ ಮಾ॥ ನ. ಕೃಷ್ಣಪ್ಪನವರು ಈಗ ನಮ್ಮ ಪಾಲಿನ ನೆನಪು ಮಾತ್ರವಾಗಿ ಉಳಿದಿದ್ದಾರೆ. ಆರು ದಶಕಗಳಿಗಿಂತಲೂ ದೀರ್ಘಕಾಲ ಸಂಘದ ಪ್ರಚಾರಕರಾಗಿ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳ ಪ್ರಾಂತಗಳ ಅಸಂಖ್ಯ ಸ್ವಯಂಸೇವಕರಲ್ಲಿ ಕಾರ್ಯೋತ್ಸಾಹ ತುಂಬುವುದರಲ್ಲಿ ಬದುಕು ಸವೆಸಿದ ಅವರು, ತಮ್ಮ ಆತ್ಮೀಯ ವೈಯಕ್ತಿಕ ಸ್ನೇಹದ ಮೂಲಕ ಸಾವಿರಾರು ಕಾರ್ಯಕರ್ತರನ್ನು ತಿದ್ದಿ ತೀಡಿ ಬೆಳೆಸಿದಂತಹವರು. ಅಗಣಿತ ಪರಿವಾರಗಳಲ್ಲಿನ ಹಿರಿಯ–ಕಿರಿಯ ಬಂಧುಗಳು, ಮಾತಾ ಭಗಿನಿಯರಿಗೆ ಬದುಕಿನ ಮೌಲ್ಯವತ್ತಾದ ಜೀವನಾದರ್ಶನಗಳನ್ನು ತಮ್ಮ ಮಾತು, ವ್ಯವಹಾರಗಳ ಮೂಲಕ ಕಲಿಸಿದ್ದಲ್ಲದೆ, ರಾಷ್ಟ್ರಜೀವನದ ಇನ್ನೂ ಹಲವು ಆಯಾಮಗಳಲ್ಲಿ ರಾಷ್ಟ್ರೀಯತೆಯ ಕಂಪು ಸೂಸುವಂತೆ ಅವರು ಪರಿಶ್ರಮಿಸಿದುದು ಸಹ ಸರ್ವವಿಧಿತ.

ಇದೀಗ ಅವರ ಬದುಕು ಸಾಧನೆಗಳನ್ನು ಸಮಗ್ರವಾಗಿ ಪರಿಚಯಿಸುವಂತಹ ಗ್ರಂಥವೊಂದನ್ನು ಪ್ರಕಟಿಸಲು ಯೋಜಿಸಲಾಗಿದೆ. ಈ ನಿಟ್ಟಿನಲ್ಲಿ ಅವರನ್ನು ನಿಕಟವಾಗಿ ಕಂಡು ಅವರ ಸಹವಾಸ ಪಡೆದಿರುವ, ಅವರ ವಿಚಾರ ಮತ್ತು ವ್ಯವಹಾರಗಳಿಂದ ತಮ್ಮ ಮನದಲ್ಲಿ ಪ್ರೇರಣೆ ತುಂಬಿಕೊಂಡಿರುವ ಎಲ್ಲ ಬಂಧು–ಭಗಿನಿಯರು ತಮ್ಮ ಅನುಭವಗಳನ್ನು, ಅಂತಹ ಪ್ರೇರಕ ಪ್ರಸಂಗಗಳನ್ನು ಬರೆದು ಕಳುಹಿಸಿಕೊಡಬೇಕಾಗಿ ಅಪೇಕ್ಷೆ. ತಮಗೆ ಅವರು ಬರೆದಿರುವ ಪತ್ರಗಳು ತಮ್ಮಲ್ಲಿದ್ದಲ್ಲಿ ಅದರ ಜೆರಾಕ್ಸ್ ಪ್ರತಿ ಮತ್ತು ತಮ್ಮ ಬಳಿ ಅವರಿಗೆ ಸಂಬಂಧಿಸಿದಂತಹ ಭಾವಚಿತ್ರಗಳಿದ್ದಲ್ಲಿ (ಸಂದರ್ಭ ಮತ್ತು ಜೊತೆಯಲ್ಲಿರುವವರ ವಿವರಗಳ ಸಹಿತ) ಅವುಗಳನ್ನು ನವೆಂಬರ್ ಅಂತ್ಯದೊಳಗೆ ಕಳುಹಿಸಬೇಕಾಗಿ ಕೋರಿಕೆ.

**ವಿಳಾಸ:** ಚಂದ್ರಶೇಖರ ಭಂಡಾರಿ, 'ಕೇಶವಕೃಪಾ', ರಂಗರಾವ್ ರಸ್ತೆ,
ಶಂಕರಪುರಂ, ಬೆಂಗಳೂರು – 560 004
ದೂರವಾಣಿ: 98806 21824 e-mail: karnatakarss@gmail.com

# ಉತ್ತರಪ್ರದೇಶ: ಗೋಹತ್ಯೆ ನಿಷೇಧಕ್ಕೆ ಮುಸ್ಲಿಂ ಸಂಘಟನೆ ಒತ್ತಾಯ



ಉತ್ತರ ಪ್ರದೇಶದಲ್ಲಿ ಹಿಂದು ಹಾಗೂ ಮುಸಲ್ಮಾನರ ಹಲವಾರು ತೀರ್ಥ ಕ್ಷೇತ್ರಗಳಿವೆ. ಹೀಗಾಗಿ ರಾಜ್ಯದಲ್ಲಿ ಮದ್ಯ ಹಾಗೂ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಮುಸ್ಲಿಂ ಸಂಘಟನೆ ಇತ್ತೆಹಾದ್–ಇ–ಮಿಲ್ಲತ್ ಸಂಘಟನೆ ಉತ್ತರ ಪ್ರದೇಶ ಸರ್ಕಾರವನ್ನು ಒತ್ತಾಯಿಸಿದೆ.

ಮದ್ಯ ಸೇವನೆಯನ್ನು ಎಲ್ಲ ಧರ್ಮಗಳು ಕೆಟ್ಟದು ಎಂದು ಮಾನ್ಯಮಾಡಿವೆ. ಬರೇಲಿಯು ಸುನ್ನಿ ಹಾಗೂ ದಿಯೋಬಂದ್‌ಗಳ ಪಾಲಿಗೆ ಪುಣ್ಯಕ್ಷೇತ್ರವಾಗಿದೆ. ಉತ್ತರಪ್ರದೇಶದಲ್ಲಿ ಮದ್ಯ ಮಾರಾಟ ಮಾಡಿದರೆ, ಪುಣ್ಯಕ್ಷೇತ್ರದಲ್ಲಿ ಮಾರಾಟ ಮಾಡಿದಂತೆ. ಆದ್ದರಿಂದ ನಿಷೇಧಿಸುವುದು ಸೂಕ್ತ ಎಂದು ಮುಖ್ಯಮಂತ್ರಿ ಅಖಿಲೇಶ್ ಸಿಂಗ್ ಯಾದವ್‌ಗೆ ಮುಸ್ಲಿಂ ಸಂಘಟನೆಯ ಅಧ್ಯಕ್ಷ ಮೌಲಾನಾ ತಕ್ವೀರ್ ರಾಜಾ ಖಾನ್ ಮನವಿ ಮಾಡಿದ್ದಾರೆ. ಬೃಹತ್ ಪ್ರಮಾಣದಲ್ಲಿ ಗೋಹತ್ಯೆ ನಡೆಸಿ ಗೋಮಾಂಸವನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಗೋವುಗಳ ಸಂಖ್ಯೆ ಕ್ಷೀಣಿಸಿ ಮಕ್ಕಳಿಗೆ ಕುಡಿಯಲು ಹಾಲು ಸಿಗುವುದಿಲ್ಲ ಎಂದಿರುವ ತಕ್ವೀರ್ ರಾಜಾ ಖಾನ್, ಗೋವುಗಳ ಸಂತತಿ ವೃದ್ಧಿಗೆ ತಳಿ ಸಂವರ್ಧನ ಕೇಂದ್ರಗಳನ್ನು ತೆರೆಯಬೇಕು ಎಂದು ಸಲಹೆ ನೀಡಿದ್ದಾರೆ. ಪಂಚಾಯತ್ ಚುನಾವಣೆ ಬಳಿಕ ಈ ಎರಡು ವಿಚಾರಗಳನ್ನು ಮುಂದಿಟ್ಟು ರಾಜ್ಯವ್ಯಾಪಿ ಬೃಹತ್ ಅಭಿಯಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

# ಭಾರತೀಯ ಸೇನೆ:
## ವಿಶ್ವದಲ್ಲೇ 5ನೇ ಅತ್ಯಂತ ಬಲಿಷ್ಠ ಪಡೆ

ಜಾಗತೀಕರಣ ಕುರಿತಾಗಿ ಕ್ರೆಡಿಟ್ ಸ್ವಿಸ್ ಇತ್ತೀಚೆಗೆ ಪ್ರಕಟಿಸಿರುವ ವರದಿಯ ಪ್ರಕಾರ ಭಾರತೀಯ ಸೇನಾ ಪಡೆ ವಿಶ್ವದಲ್ಲೇ ಐದನೇ ಅತ್ಯಂತ ಬಲಿಷ್ಠ ಪಡೆಯಾಗಿದೆ. ವಿಶ್ವ ಅತ್ಯಂತ ಬಲಿಷ್ಠ ಸೇನಾಪಡೆಗಳ ಪಟ್ಟಿಯಲ್ಲಿ ಅಮೆರಿಕ ನಂಬರ್ ಒನ್ ಸ್ಥಾನದಲ್ಲಿದೆ. ಅನಂತರದ ಸ್ಥಾನಗಳು ರಷ್ಯಾ, ಚೀನಾ ಮತ್ತು ಜಪಾನಿಗೆ ಅನುಕ್ರಮವಾಗಿ ಪ್ರಾಪ್ತವಾಗಿವೆ. ತನ್ನ ನಿಕಟ ಎದುರಾಳಿಗಳ ವಿರುದ್ಧದ ಅಮೆರಿಕದ ಸಾಂಪ್ರದಾಯಿಕ ಯುದ್ಧ ಸಾಮರ್ಥ್ಯವು ಪರಮೋಚ್ಚ ಪಾರಮ್ಯವನ್ನು ಹೊಂದಿದೆ.



ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 97312 64009